
ಸಂಚಿಕೆ
೧೨
ಸೆಪ್ಟೆಂಬರ್, ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



ಬೃಂದಾವನ



Copyright © KCO – Brindavana

ಸಂಚಿಕೆ
೧೨
ಸೆಪ್ಟೆಂಬರ್, ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



ಈ ಸಂಚಿಕೆಯಲ್ಲಿ....


| | | | |
|---|---|---|---|
| ಸಂಪಾದಕೀಯ | ಪು ೧ | ಅಂತರಂಗ | ಪು ೧೦ |
| ಅಭಿಮಾನಿ ತಂಡದ ನುಡಿ | ಪು ೨ | ಕವನಗಳು | ಪು ೧೧ |
| ವಿಜ್ಞಾನ | ಪು ೩-೪ | ಬಾಲ ಪ್ರತಿಭೆ | ಪು ೧೨ |
| ಕಥಾ ಸಮಯ | ಪು ೫-೮ | ರಸ ಪ್ರಶ್ನೆ | ಪು ೧೩ |
| ಹಬ್ಬ | ಪು ೯ | | |




ಸತ್ಯ ಪ್ರಸಾದ್
ಪ್ರಧಾನ ಸಂಪಾದಕರು


ರಾಘವೇಂದ್ರ ಕುಂದಲಗುರ್ಕಿ
ಸಂಪಾದಕರು


ಭಾಸ್ಕರ ತೈಲಗೇರಿ
ಸಂಪಾದಕ ವರ್ಗ


ಅನಿಲ್ ಭಾರಧ್ವಾಜ
ಸಂಪಾದಕ ವರ್ಗ


ಪ್ರಶಾಂತ ಎಂ.
ಸಂಪಾದಕ ವರ್ಗ


ಅಮೂಲ್ಯ ಕಟ್ಟೀಮನಿ
ಸಂಪಾದಕ ವರ್ಗ


## ಪ್ರಧಾನ ಸಂಪಾದಕರಿಂದ......

ಬೃಂದಾವನ ಸಾಹಿತ್ಯ ಪ್ರೇಮಿಗಳಿಗೆ ನಮಸ್ಕಾರಗಳು...

ಇಂದು ಸಂಭ್ರಮದ ಘಳಿಗೆ!!!
ಕಾರಣ ಬರುವ ಸೆಪ್ಟೆಂಬರ್ ೨೩ ರಂದು 'ಹೈಟ್ಸ್ ಟೌನ್ ಹೈ ಸ್ಕೂಲ್' ನಲ್ಲಿ ಬೃಂದಾವನ ಸಾಹಿತ್ಯ ಬಳಗ ಸತತವಾಗಿ ಮತ್ತು ಯಶಸ್ವಿಯಾಗಿ ಆಯೋಜಿಸುತ್ತಿರುವ ಮೂರನೆಯ 'ಸಾಹಿತ್ಯ ಹಬ್ಬ'. ನೆನೆಪಿನ ಪುಟಗಳನ್ನು ಮೂರು ವರ್ಷ ಹಿಂದಕ್ಕೆ ತಿರುವಿ ನೋಡಿದರೆ... ಅಂದು ನಮ್ಮಲ್ಲಿದ್ದದ್ದು ಒಂದು ತರಹ ದುಗುಡ ಮತ್ತು ಆತಂಕ. ಈ ಕಾರ್ಯಕ್ರಮ ಆಯೋಜಿಸುವುದು ಸವಾಲಿನ ಮಾತೇ ಸರಿ. ಅಂದು ಉದ್ಘಾಟನೆಗೆ ನಮ್ಮ ಹೆಮ್ಮೆಯ ಅನಿವಾಸಿ ಬರಹಗಾರರಾದ ಮೈ.ಶ್ರೀ.ನಟರಾಜ್ ಮತ್ತು ಶ್ರೀವತ್ಸ ಜೋಶಿಯವರನ್ನು ಮತ್ತು ನಾಡಿನ ಪ್ರಸಿದ್ಧ ಅಂಕಣಕಾರ ಮಹಾಬಲ ಮೂರ್ತಿ ಕೊಡ್ಲಕೆರೆ ಮತ್ತು ಡಾ ಪುತ್ತೂರಾಯ ಅವರನ್ನು ಆಹ್ವಾನಿಸಿದ್ದೆವು, ಸಾಹಿತ್ಯ ಸಮಾರಂಭಗಳಲ್ಲಿ ಸಹಜವಾಗಿ ಸಭಿಕರ ಸಂಖ್ಯೆ ವಿರಳ. ಕೆಲವೇ ಬೆರಳೆಣಿಕೆ ಪ್ರೌಢ ಸಭಿಕರ, ಸಾಹಿತ್ಯಾಸಕ್ತರ ಕಾರ್ಯಕ್ರಮವಾಗುತ್ತದೆವೆಂದು ಊಹಿಸಿದ್ದ ನಮಗೆ ನೂರೈವತ್ತಕ್ಕೂ ಹೆಚ್ಚು ಆಸಕ್ತರು ಭಾಗವಹಿಸಿದ್ದು ನಮ್ಮಲ್ಲಿ ಉತ್ಸಾಹವನ್ನು ಇಮ್ಮಡಿಗೊಳಿಸಿತ್ತು.

ಅಂದಿನ ನೆನೆಪು ಇನ್ನೂ ಹಚ್ಚ ಹಸುರಾಗಿದೆ, ಸಾಹಿತ್ಯ ಬೃಂದಾವನದ ಉದ್ಘಾಟನೆಯ ನಂತರ 'ಕನ್ನಡ ಸಾಹಿತ್ಯ ಸೇವೆಯಲ್ಲಿ ಅನಿವಾಸಿಗಳ ಪಾತ್ರ' ದ ಬಗ್ಗೆ ಕೊಡ್ಲಕೆರೆ ಪ್ರೌಢ ಅಭಿಪ್ರಾಯ ಮಂಡಿಸಿದರು. ನಂತರದ ಮೈಶ್ರೀ ಯವರು 'ಸುಂದರ ಕಾಂಡ ವಾಚನ' ಪ್ರಚುರ ಪಡಿಸಿದರು ಅದಕ್ಕೆ ಸಮನಾಗಿ ಕನ್ನಡ ನಾಡಿನ ಹೆಮ್ಮೆಯ ಚಿತ್ರಕಾರ ಡಾ. ವರ್ಮಾ ರವರು ವರ್ಣಚಿತ್ರ ಬಿಡಿಸಿದರು, ಅದೊಂದು ರೀತಿಯ ಜುಗಲ್ ಬಂದಿ ಮತ್ತು ಅಮೋಘ ಘಳಿಗೆ.ನಂತರ ಪುತ್ತೂರಾಯ ವಿನೋದದಲ್ಲಿ ಸಭಿಕರನ್ನು ರಂಜಿಸಿದರು.

ಎರಡನೇ ಸಾಹಿತ್ಯ ಸಮ್ಮೇಳನಕ್ಕೆ ಡಾ.ಶರಣ ಬಸವ ಅಂಗಡಿ ಮತ್ತು ಶ್ರೀ ಚಟ್ಟನಲ್ಲಿ ಮಹೇಶ್ ರವರನ್ನು ಆಹ್ವಾನಿಸಿದ್ದೆವು. ಡಾ. ಅಂಗಡಿ ಯವರು 'ವಿಜ್ಞಾನದಲ್ಲಿ ಹಾಸ್ಯ' ದ ಬಗ್ಗೆ ತುಂಬಾ ತಿಳುವಳಿಕೆ ಮೂಡಿಸಿದರು, ಮಹೇಶ್ ರವರದು ಅದ್ಭುತ ವಾಗ್ಝರಿ 'ಸಾಮಾಜಿಕ ಜಾಲಗಳಲ್ಲಿ ಕನ್ನಡದ ಪ್ರಸ್ತುತತೆ' ಬಗ್ಗೆ ಮನಮುಟ್ಟುವಂತೆ ಮಾತನಾಡಿದರು.

ಈ ಬಾರಿ ನಾಡಿನ ಜನಪ್ರಿಯ ಮಾತುಗಾರ್ತಿ 'ಸುಧಾ ಬರಗೂರು' ಅವರನ್ನು ಆಹ್ವಾನಿಸಿದ್ದೇವೆ. 'ಕನ್ನಡ ಸಾಹಿತ್ಯ ದಲ್ಲಿ ಹಾಸ್ಯ' ದ ಬಗ್ಗೆ ಮಾತನಾಡಲಿದ್ದಾರೆ, ನಿಮಗೆಲ್ಲ ತಿಳಿದಿರುವಂತೆ ಸುಧಾ ಅದ್ಭುತ ವಾಕ್ಚತುರೆ. ನಿಮ್ಮನ್ನು ನಗೆಗಡಲಿನಲ್ಲಿ ತೇಲಿಸುವುದರಲ್ಲಿ ಅನುಮಾನವೇ ಇಲ್ಲ. ಸಾಹಿತ್ಯದ ಕಾರ್ಯಕ್ರಮಗಳ ಜೊತೆ, ತಬಲಾ ನಾಣಿ, ವೇಷ, ತರಂಗ ತಂಡದ ಇನ್ನೂ ಅನೇಕ ಕಾರ್ಯಕ್ರಮಗಳಿವೆ ದಯವಿಟ್ಟು ಕಾರ್ಯಕ್ರಮಕ್ಕೆ ತಪ್ಪದೆ ಬನ್ನಿ.

ನಮ್ಮ ಬೃಂದಾವನ ವಾಣಿ ತಂಡ ಅತ್ಯಂತ ಪ್ರೀತಿಯಿಂದ ಈ ಸಂಚಿಕೆಯನ್ನು ಹೊರತಂದಿದ್ದಾರೆ, ಅವರೆಲ್ಲರಿಗೂ ನನ್ನ ನಮನಗಳು.

ಮರೆಯದೆ ಸೆಪ್ಟೆಂಬರ್ ೨೩ ರಂದು 'ಗಣೇಶ ಹಬ್ಬ ಮತ್ತು 'ಸಾಹಿತ್ಯ ಹಬ್ಬದಲ್ಲಿ ಸಿಗೋಣ.

ನಮಸ್ಕಾರಗಳು
*-ಸತ್ಯ*

## ಸಂಪಾದಕರಿಂದ......

ಪ್ರಕೃತಿಯ ವಿಕೋಪ - ಚಂಡಮಾರುತದ ರೌದ್ರ ತಾಂಡವ..

ಆತ್ಮೀಯ ವಿಶ್ವ ಕನ್ನಡಿಗರಿಗೆ ಹಾಗು ನ್ಯೂಜರ್ಸಿಯ ಪ್ರಿಯ ಓದುಗರಿಗೆ ಬೃಂದಾವನ ವಾಣಿಯ ದಸರಾ ಹಬ್ಬದ ಹಾರ್ದಿಕ ಶುಭಾಶಯಗಳು.

ಕನ್ನಡ ತಾಯಿ ಚಾಮುಂಡೇಶ್ವರಿಯ ಆಶೀರ್ವಾದ ನಮ್ಮ -ನಿಮ್ಮೆಲ್ಲರ ಮೇಲೆ ಸದಾ ಇರಲಿ. ನಿಮ್ಮ ಪ್ರೀತಿಯ ಹಾರೈಕೆ ಇದೇ ರೀತಿ ಬೃಂದಾವನ ವಾಣಿಯ ಮೇಲೆ ಮುಂದುವರಿಯಲಿ.

"ಹಾರ್ವಿ" ಚಂಡಮಾರುತಕ್ಕೆ ಹಲವಾರು ಮಂದಿ ಬಲಿಯಾಗಿದ್ದಾರೆ. ಟೆಕ್ಸಾಸ್ ರಾಜ್ಯದಲ್ಲಿ ಲಕ್ಷಾಂತರ ಜನರ ಮನೆ-ವಸ್ತುಗಳು ನೀರಿನ ಪಾಲಾಗಿವೆ. ಕ್ಯಾಟೆಗರಿ ೩ (೧೨೫ ಮೈಲ್ಸ್ ) ಆರ್ಭಟದ ಚಂಡಮಾರುತ ಹೂಸ್ಟನ್ ನಗರದಲ್ಲಿ ನಾಲ್ಕು ದಿನಕ್ಕೂ ಹೆಚ್ಚು ನೆಲೆ ನಿಂತಿದ್ದು ಸಂಪೂರ್ಣ ಜನ ಜೀವನ ಅಸ್ತವ್ಯಸ್ತವಾಗಿದೆ. ಲಕ್ಷಾಂತರ ಮನೆಗಳು ಸಂಪೂರ್ಣ ಜಲಾವೃತವಾಗಿದ್ದು, ಪುನರ್ ನಿರ್ಮಾಣಕ್ಕೆ ಇನ್ನು ಹಲವಾರು ವರ್ಷಗಳೇ ಬೇಕಾಗಬಹುದು.

ಇನ್ನೂ "ಹಾರ್ವಿ" ಯಾ ಆರ್ಭಟ ಮುಗಿಯುವುದೊರೊಳಗಾಗಿ ಮತ್ತೊಂದು ಹರಿಕೇನ್ "ಆರ್ಮಾ" ಅಟ್ಲಾಂಟಿಕ್ ಸಾಗರದಲ್ಲಿ ಹಲವಾರು ಸಣ್ಣ ದೇಶಗಳನ್ನು ನೆಲಸಮ ಮಾಡಿದೆ.ಕೆರೆಬಿಯನ್ ದೇಶಗಳನ್ನು ಒಂದರ ಮೇಲೊಂದು ನೆಲಸಮ ಮಾಡಿ , ಫ್ಲೋರಿಡಾ ರಾಜ್ಯವನ್ನು ಜಲಾವೃತ ಮಾಡಿದ "ಇರ್ಮಾ" ಚಂಡಮಾರುತ ೬ ಮಿಲಿಯನ್ ನೆಲಸಿಗರನ್ನು ವಲಸೆಗಾರರನ್ನಾಗಿಸಿದೆ. ಪ್ರಕೃತಿಯ ವಿಕೋಪಕ್ಕೆ ಮಾನವನ ಕೊಡುಗೆ ಬಹಳ, ಹಲವಾರು ವಿಜ್ಞಾನಿಗಳು , ಪರಿಸರ ಪ್ರೇಮಿಗಳು ಒಕ್ಕೂರಲಿನಿಂದ ಕೂಗುತ್ತಿದ್ದರು, ಸರ್ಕಾರ ಮೂಕ ಪ್ರೇಕ್ಷಕನಂತೆ ಬೇರೆ ಕಡೆ ಮುಖ ತೋರಿಸುತ್ತಿರುವುದು ದುರ್ದೈವ. ಈಗಲಾದರೂ ಅಮೇರಿಕಾ ಎಚ್ಚೆತ್ತುಕೊಂಡು 2015ರ ಪ್ಯಾರಿಸ್ ಜಾಗತಿಕ ಹವಾಮಾನ ಒಪ್ಪಂದವನ್ನು ಮನ್ನಿಸಿದರೆ ಒಳ್ಳೆಯದು.

ಬೃಂದಾವನ ವಾಣಿಯ ಬಳಗದಿಂದ ನೆರೆಯಲ್ಲಿ ನೊಂದ ಸಂತಸ್ತರಿಗೆ ಸಂತಾಪ ಸೂಚಿಸುತ್ತದೆ.
ಸಂತಸ್ತರಿಗೆ ಸಹಾಯ ಮಾಡುತ್ತಿರುವ ಕೆಲವು ಚಾರಿಟಿ ಸಂಸ್ಥೆಗಳು.
https://ghcf.org/hurricane-relief/
https://secure.americares.org/

ಬೃಂದಾವನದ ಅಭಿಮಾನಿ ತಂಡದ ಮತ್ತೊಂದು, ವಿಭಿನ್ನವಾದಂತ ಗಣೇಶೋತ್ಸವ ಕಾರ್ಯಕ್ರಮ ಇದೆ. ಎಲ್ಲಾ ಮರೆಯದೆ ಬನ್ನಿ ಕಳೆದ ಸಂಚಿಕೆಯಿಂದ ನಾವು ವಿಡಿಯೋ/ಆಡಿಯೋ ತುಣುಕಗಳನ್ನು ಲೇಖನಕ್ಕೆ ಪೂರಕವಾಗಿ ಸೇರಿಸುತ್ತಿದ್ದೇವೆ. ಮರೆಯದೆ ನೋಡಿ, ನಿಮ್ಮ ಅನಿಸಿಕೆಗಳನ್ನು ತಿಳಿಸಿ.

ಸೌತ್ ಬ್ರುನ್ಸ್ವಿಕ್ , ಈಸ್ಟ್ ವಿಂಡ್ಸರ್ ಹಾಗು ಎಡಿಸನ್ ನಗರಗಳಲ್ಲಿ ಕನ್ನಡ ಶಾಲೆ ಇದೇ ತಿಂಗಳಲ್ಲಿ ೨೦೧೭ನೇ ತರಗತಿಗಳು ಶುರುವಾಗಲಿದೆ , ನಿಮ್ಮ ಮಕ್ಕಳಿಗೆ ಕನ್ನಡ ಕಲಿಯುವ ಉತ್ತಮ ಅವಕಾಶ. ಮರೆಯದೆ ಸೇರಿಸಿ.

ಮತ್ತೊಮ್ಮೆ ಸಿಗೋಣ ,

*-ರಾಘವೇಂದ್ರ ಕುಂದಲಗುರ್ಕಿ*

ಮುಖಪುಟ ಮತ್ತು ಸಂಪಾದಕೀಯ ಪುಟ ಚಿತ್ರ:
ಮುರುಡೇಶ್ವರ, ಕರ್ನಾಟಕ

ಚಿತ್ರ ಕೃಪೆ : ಅಂತರ್ಜಾಲ


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಅಭಿಮಾನಿ ತಂಡದ ನುಡಿ

*"ಕನ್ನಡ ಹಬ್ಬಗಳ ಈ ಆನಂದ, ಸದಾಕಾಲ ಇರಲಿ ನಮ್ಮೊಡನೆ..."*



**ನ್ಯೂ** ಜರ್ಸಿ ಕನ್ನಡ ಸ್ನೇಹಿತರಿಗೆಲ್ಲ ಪ್ರೀತಿಪೂರ್ವಕ ವಂದನೆಗಳು.

ಮೊನ್ನೆ ಆಗಸ್ಟ್ ತಿಂಗಳ ಕೊನೆಯ ವಾರದಲ್ಲಿ ಬಹಳಷ್ಟು ದಿನಗಳ ನಂತರ ನಮ್ಮ ಕುಟುಂಬದ ಎಲ್ಲರೂ ಸೇರಿ ಭಾರತಕ್ಕೆ ಹೋಗಿದ್ದೆವು. ಅಲ್ಲಿ ಕಳೆದ ಆ ಹತ್ತು ದಿನಗಳು ಬಹುಕಾಲ ನೆನಪಿನಲ್ಲಿ ಉಳಿಯುವಂತಹದ್ದು. ಎಲ್ಲ ಸೇರಿ ಜೋಗದ ಮುಂದೆ ನಿಂತು ಫೋಟೋ ಸೆರೆ ಹಿಡಿಯುತ್ತಿರುವಾಗ ಮೂಗೂರು ಮಲ್ಲಪ್ಪನವರ ಸುಂದರ ಗೀತೆ "ಮಾನವನಾಗಿ ಹುಟ್ಟಿದ ಮೇಲೆ ಏನೇನ್ ಕಂಡಿ ..." ಕಿವಿಯ ತುಂಬಾ ಡಾ. ರಾಜ್ ಕುಮಾರ್ ಧ್ವನಿಯಲ್ಲಿ ಗುಣಿ ಗುಣಿಸುತಿತ್ತು. ಉತ್ತರ ಕನ್ನಡ ಜಿಲ್ಲೆಯಲ್ಲಿರುವ ನಮ್ಮ ಹಳ್ಳಿ, ಕೊಳಗಿಯಲ್ಲಿ ಆದಿತ್ಯನ ಹುಟ್ಟು ಹಬ್ಬ ಆಚರಿಸಿದಾಗ, ಹಳ್ಳಿಯ ಮಕ್ಕಳೆಲ್ಲ ಸೇರಿ ಅವನನ್ನು ಅಭಿನಂದಿಸಿದ್ದು ನೋಡಿ, ಸಾವಿರಾರು ಮೈಲುಗಳ ದೂರವಿದ್ದರೂ, ನಮ್ಮ ಸಂಬಂಧಗಳ ಕೊಂಡಿ ಬಲವಾಗಿ ಬೆಸೆಯಲು ಕಾರಣವಾದ ಕನ್ನಡ ಭಾಷೆಯನ್ನು ಮನಸಾರೆ ನಮಿಸಿದೆ. ಬೆಂಗಳೂರಿನ ತುಂಬೆಲ್ಲ ಹಬ್ಬದ ವಾತಾವರಣ. ವಿಜಯನಗರದ ಸರ್ವಿಸ್ ರಸ್ತೆಯ ಅಂಗಡಿಗಳಲ್ಲಿ ಹೂವು ಖರೀದಿಸುವಾಗ, ರಸ್ತೆ ಪಕ್ಕದ ಗಣೇಶ ಹಬ್ಬದ ಕಾರ್ಯಕ್ರಮಗಳನ್ನು ನೋಡಿದಾಗ, ಇನ್ನೂ ಸ್ವಲ್ಪ ಕನ್ನಡ ಉಳಿದಿದೆ ಎನಿಸಿತು. ಎಲ್ಲ ಪ್ರಯತ್ನ ಪಟ್ಟರೆ ಕನ್ನಡಮ್ಮ ಉಳಿದಾಳು, ಬೆಳೆದಾಳು...

ಅಮೆರಿಕಕ್ಕೆ ಬಂದ ಮರುದಿನವೇ ಡಲ್ಲಾಸ್ ನಲ್ಲಿ ಏರ್ಪಡಿಸಿದ್ದ ನಾಲ್ಕನೆಯ ನಾವಿಕ ಸಮ್ಮೇಳನದಲ್ಲಿ ಭಾಗವಹಿಸಿದೆ. ನಾಲ್ಕು ದಿನಗಳು ಕಳೆದಿದ್ದು ತಿಳಿಯಲೇ ಇಲ್ಲ. ಬಿಸಿನೆಸ್ ಫೋರಮ್ ನಲ್ಲಿ ಭಾಗವಹಿಸಿದಾಗ ತಿಳಿದ ಸಾಕಷ್ಟು ಮಾಹಿತಿ, ಹಲವು ಸಾಧಕರ ಜೊತೆಗಿನ ಚರ್ಚೆ, ಜೀವನದುದ್ದಕ್ಕೂ ಕಲಿಯುವ ಆಸೆಯಿರುವ ಮನಸ್ಸಿಗೆ ತೃಪ್ತಿಯಾಯಿತು. ೮೦ರ ದಶಕದ ಸತ್ತವರ ನೆರಳು ನಾಟಕ, ನನ್ನ ರವೀಂದ್ರ ಕಲಾಕ್ಷೇತ್ರದ ದಿನಗಳನ್ನು ನೆನಪು ಮಾಡಿತು. ಬೆನಕ ನಾಟಕ ಗುಂಪಿನ ಸ್ನೇಹಿತರಾದ ನಾಗಾಭರಣ, ಸುಂದರರಾಜ್ ರವರನ್ನು ಜೊತೆ ಮಾಡಿ, ಯಾವುದೇ ರೀತಿ ರಾಜಿ ಮಾಡಿಕೊಳ್ಳದೆ ಯಶಸ್ವಿಯಾಗಿ ನಾಟಕವನ್ನು ಪ್ರದರ್ಶಿಸಿದ ವಲ್ಲೀಶರವರ ಶ್ರಮ ನಿಜಕ್ಕೂ ಪ್ರಶಂಸನಾರ್ಹ. ಕಲ್ಪನಾ ನಾಗನಾಥ್ ರವರು ಸೇರಿ ಹಾಡಿದ ರಂಗ ಗೀತೆಗಳು. ನಂದ ಕುಲಕರ್ಣಿಯವರ ನಚಿಕೇತ ನಾಟಕ, ಕನ್ನಡದ ವಿವಿಧ ಆಯಾಮಗಳು ಇನ್ನೂ ಪ್ರಸ್ತುತ ಎಂದು ತೋರಿಸಿದವು. ಕೊನೆಯ ದಿನದ ಸಂಜೆ, ರಾಜೇಶ್ ಕೃಷ್ಣನ್ ಮತ್ತು ಅನುರಾಧ ಭಟ್ ರವರ ಸಂಗೀತ ಕಾರ್ಯಕ್ರಮ, ಸಮ್ಮೇಳನದ ಮುಖ್ಯ ಆಕರ್ಷಣೆ. ಈ ಸಂಗೀತ ಕಾರ್ಯಕ್ರಮದಲ್ಲಿ ತರಂಗ ಫ್ಯೂಶನ್ ಬ್ಯಾಂಡ ನ ವೆಂಕಿ, ಸುಚೇತನ್, ಐಶ್ವರ್ಯ, ರಾಜೀವ್, ಭರತ್, ಹಾಡು ಮತ್ತು ವಾದ್ಯಗಳ ಸಹಕಾರ ನೀಡಿ ಎಲ್ಲರ ಮನ ಸೂರೆಗೊಂಡರು. ಸಭಿಕರೆಲ್ಲ ಹಾಡುಗಳ ಜೊತೆ ದನಿಗೂಡಿಸಿ ಹಾಡಿದ್ದು ನೋಡಿ ಇಂತಹ ಕಾರ್ಯಕ್ರಮಗಳು ಮತ್ತೆ ಮತ್ತೆ ಬೇಕೆನಿಸಿತು. ಈ ತರಂಗ ಬ್ಯಾಂಡ ನಮ್ಮ ಬೃಂದಾವನದ ಗಣೇಶ ಹಬ್ಬದಲ್ಲಿ ಕಾರ್ಯಕ್ರಮ ನಡೆಸಿ ಕೊಡುತ್ತಿರುವುದು ಸಂತಸದ ವಿಷಯ.

ಇದೆ ತಿಂಗಳ ೨೩ ರಂದು ಬೃಂದಾವನದ ಗಣೇಶ ಹಬ್ಬ ಮತ್ತು ಸಾಹಿತ್ಯ ಬೃಂದಾವನ. ನಿಮಗೆ ಎಲ್ಲ ರೀತಿಯ ಸುಂದರ ಅನುಭವಗಳನ್ನು ನೀಡುವುದಕ್ಕಾಗಿ ಅಭಿಮಾನಿ ತಂಡ ಸಿದ್ಧತೆಗಳನ್ನು ಮಾಡಿಕೊಂಡಿದೆ. ನಮ್ಮ ಮಕ್ಕಳಿಂದ ವಿಶೇಷ ಗಣೇಶ ಪೂಜೆ. ಮಕ್ಕಳೆಲ್ಲ ಸೇರಿ ಮಣ್ಣಿನ ಗಣೇಶ ಮೂರ್ತಿಗಳನ್ನು ರಚಿಸಲಿದ್ದಾರೆ. ಈ ಹಿಂದೆ ತಮ್ಮ ಯಶಸ್ವೀ ನಾಟಕ, ರಬ್ಬಿಯಿಂದ ಎಲ್ಲರ ಮನ ಗೆದ್ದ ರಂಗವರ್ತುಲ ತಂಡ ಯಕ್ಷಗಾನ ಹಿನ್ನೆಲೆಯಲ್ಲಿ ರೂಪುಗೊಂಡ "ವೇಷ" ಎಂಬ ನಾಟಕ ಪ್ರದರ್ಶಿಸಲಿದ್ದಾರೆ. ಈ ಸಲದ ಗಣೇಶ ಹಬ್ಬದ ಥೀಮ್ - ಹಾಸ್ಯ. ಈ ಕಾರ್ಯಕ್ರಮದಲ್ಲಿ ತಬಲಾ ನಾಣಿ ತಂಡದವರು ತಮ್ಮನ್ನೆಲ್ಲ ನಕ್ಕು ನಗಿಸಲಿದ್ದಾರೆ. ಇದರ ಜೊತೆಗೆ ಅಭಿಮಾನಿ ತಂಡ ಬೃಂದಾವನದ ಮೂರನೆಯ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಂಡಿದೆ. ಈ ಸಂದರ್ಭದಲ್ಲಿ ನಮ್ಮ ಕನ್ನಡ ಸ್ನೇಹಿತರೆಲ್ಲ ಸೇರಿ ಬರೆದ ತಮ್ಮ ಬದುಕಿನ ಅನುಭವಗಳನ್ನು ಸಂಕಲಿಸಿ "ಬದುಕು ಜಟಕಾಬಂಡಿ" ಎಂಬ ಪುಸ್ತಕವಾಗಿ ಬಿಡುಗಡೆ ಮಾಡುತ್ತಿದ್ದೇವೆ. ಈ ಪುಸ್ತಕಕ್ಕಾಗಿ ಹಿರಿಯ ಕನ್ನಡ ಕವಿ ಪ್ರೊಫೆಸರ್ ನಿಸ್ಸಾರ್ ಅಹ್ಮದ್ ರವರು ಪ್ರೀತಿಯಿಂದ ಮುನ್ನುಡಿ ಬರೆದು ಕೊಟ್ಟಿದ್ದಾರೆ. ನಮ್ಮ ಸಾಹಿತ್ಯ ಬೃಂದಾವನದ ಮುಖ್ಯ ಅತಿಥಿ ಶ್ರೀಮತಿ ಸುಧಾ ಬರಗೂರ್ ರವರು ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಕನ್ನಡತಿ ಸುಧಾರವರ ಮಾತುಗಳನ್ನು ಕೇಳುವುದೇ ಚೆಂದ. ಗಂಟೆಗಳು ಕಳೆದದ್ದು ಗಮನಕ್ಕೆ ಬರುವುದೇ ಇಲ್ಲ.




ಈ ಸಲ ಗಣೇಶ ಹಬ್ಬದ ಮತ್ತೊಂದು ಮುಖ್ಯ ಆಕರ್ಷಣೆ ತರಂಗ ತಂಡದ ವಾದ್ಯ ಗೋಷ್ಠಿ. ಸಂಗೀತದಲ್ಲಿ ಅತ್ಯಂತ ಪ್ರತಿಭಾಶಾಲಿಗಳ ತಂಡ ಇದು. ಪ್ರೊಫೆಸರ್ ಸುಚೇತನ್ ಮತ್ತು ಐಶ್ವರ್ಯ ರಂಗರಾಜನ್ ಜಿ ಟಿವಿ ಸರಿಗಮ ಕಾರ್ಯಕ್ರಮದಲ್ಲಿ ಹೆಸರು ಮಾಡಿದ್ದಾರೆ. ತಬಲಾ ಮತ್ತು ಮ್ಯೂಸಿಕ್ ಒರ್ಕೆಸ್ಟ್ರಾಷನ್ ಮಾಡುತ್ತಿರುವ ವೆಂಕಿಯ ಸಂಗೀತದ ಕೆಲಸಗಳನ್ನು ನೋಡಿದಾಗ ಭಾಪುರೆ ಎಂದೆನಿಸಿತು. ಅವರು ಮತ್ತು ವರುಣ್, ನಾಡಿನ ೧೫೦ ಸಂಗೀತ ಶ್ರೇಷ್ಠರನ್ನೆಲ್ಲ ಸೇರಿಸಿ ನಿರ್ಮಿಸಿರುವ "ಒನ್ ಸಾಂಗ್" ಅತ್ಯಂತ ಶ್ಲಾಘನೀಯ. ಶೀಘ್ರದಲ್ಲಿಯೇ ಅದು ಎಲ್ಲ ಕಡೆ ವೈರಲ್ ಆಗುವುದರಲ್ಲಿ ಸಂದೇಹವಿಲ್ಲ. ಇವರ ಜೊತೆ ರಾಜೀವ್ ಮತ್ತು ಭರತ್ ಕೀ ಬೋರ್ಡ್ ಮತ್ತು ಫ್ಲ್ಯೂಟ್ ನುಡಿಸಲಿದ್ದಾರೆ. ಭಾವಗೀತೆಗಳು, ಹಳೆಯ ಮತ್ತು ಹೊಸ ಚಲನ ಚಿತ್ರಗೀತೆಗಳು, ಜನಪದ ಗೀತೆಗಳು..ಖಂಡಿತವಾಗಿ ಮೂರು ತಾಸುಗಳ ಕನಸಿನ ಲೋಕದಲ್ಲಿ ವಿಹರಿಸಲು ಸಿದ್ಧವಾಗಿರಿ. ಗಣೇಶನ ಹಬ್ಬದಲ್ಲಿ ಅವನಿಗೆ ಪ್ರಿಯವಾದ ಹಬ್ಬದೂಟವಿಲ್ಲದಿದ್ದರೆ ಆದೀತೆ ?. ನಿಮಗೆಲ್ಲ ಇಷ್ಟವಾಗುವ ಹಬ್ಬದೂಟ ನಿಮಗಾಗಿ ಕಾಯುತ್ತಿರುತ್ತದೆ. ನಿಮ್ಮ ಕುಟುಂಬ ಸಮೇತರಾಗಿ ಬನ್ನಿ ...,ಸ್ನೇಹಿತರನ್ನೂ ಕರೆ ತನ್ನಿ.

ಬೃಂದಾವನ ಕನ್ನಡ ಶಾಲೆಗಳು ಇದೆ ತಿಂಗಳಲ್ಲಿ ನ್ಯೂ ಜೆರ್ಸಿಯ ಮೂರು ಕಡೆಗಳಲ್ಲಿ ಅಂದರೆ, ಸೌತ್ ಪ್ಲೇನ್ ಫೀಲ್ಡ್, ಈಸ್ಟ್ ವಿಂಡ್ಸರ್ ಮತ್ತು ಎಡಿಸನ್ ನಲ್ಲಿ ಪ್ರಾರಂಭವಾಗಿವೆ. ಅಮೇರಿಕಾದ ಮಕ್ಕಳಿಗಾಗಿಯೇ ಎಂಟು ಹಂತದ ಕನ್ನಡ ಕರಿಕ್ಯುಲಮ್ ಸಿದ್ಧಪಡಿಸಿದ್ದೇವೆ. ನಿಮ್ಮ ಮಕ್ಕಳನ್ನು ಹತ್ತಿರದ ಕನ್ನಡಶಾಲೆಗೆ ತಪ್ಪದೆ ಸೇರಿಸಿ.

ವಂದನೆಗಳೊಂದಿಗೆ,

*ಡಾ. ಅಶೋಕ್ ಕಟ್ಟಿಮನಿ*

ಅಭಿಮಾನಿ ತಂಡದ ಪರವಾಗಿ

ಅಧ್ಯಕ್ಷರು, ಬೃಂದಾವನ ಕನ್ನಡ ಕೂಟ


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜರ್ಸಿಯ ದ್ವೈಮಾಸಿಕ ಪತ್ರಿಕೆ



# ಗ್ರಹಣ(ಗಳು)




ಮೂಲ
ಎಂ.ಆರ್.ದ್ವಾರಕಾನಾಥ್



ಕನ್ನಡ ಅನುವಾದ
ತ.ನಂ.ರಾಜಶೇಖರ

**ಒಂದು ಅದ್ಭುತ ಪುರಾಣ ಕತೆ:** ಹಿಂದು ಪುರಾಣ ಕತೆಗಳಲ್ಲಿ ದೇವತೆಗಳು ಮತ್ತು ರಾಕ್ಷಸರು (ಅಸುರರು) ಸದಾ ಒಂದಲ್ಲ ಒಂದು ಘರ್ಷಣೆಯಲ್ಲಿ ತೊಡಗಿರುತ್ತಾರೆ. ಅಸುರರು ದೇವತಗಳ ರಾಜ ಇಂದ್ರನನ್ನು ನಿರಂತರವಾಗಿ ಹೆದರಿಸುತ್ತಲೇ ಇರುತ್ತಾರೆ. ಆದರೆ ಒಂದು ಸಂದರ್ಭದಲ್ಲಿ ಅಮೃತ ಪಡೆದು ಅಮರತ್ವವನ್ನು ಪಡೆಯಲು ದೇವತೆಗಳೊಂದಿಗೆ ಸಹಕರಿಸಲು ಒಪ್ಪುತ್ತಾರೆ. ಅಮೃತವನ್ನು ಪಡೆಯಬೇಕಾದರೆ ಸಮುದ್ರವನ್ನು ಕಡೆಯಬೇಕಾಗಿದ್ದು, ಅದರಲ್ಲಿ ಸಾಕಷ್ಟು ಉತ್ಸಾಹದಿಂದ  ಭಾಗವಹಿಸುತ್ತಾರೆ. ಕೊನೆಗೆ ದೇವತೆಗಳ ವೈದ್ಯ ಧನ್ವಂತರಿ ಸಮುದ್ರದಿಂದ ಅಮೃತ ತುಂಬಿದ ಪಾತ್ರೆ ಹಿಡಿದು ಹೊರಬರುತ್ತಾನೆ. ಈಗಾಗಲೇ ಸಾಕಷ್ಟು ಬಲಿಷ್ಠರಾಗಿರುವ ಅಸುರರೊಂದಿಗೆ ಅಮೃತವನ್ನು ಹಂಚಿಕೊಳ್ಳಲು ದೇವತೆಗಳು ಇಷ್ಟಪಡುವುದಿಲ್ಲ. ಅಮೃತ ಪಡೆಯಲು ಇಬ್ಬರೂ ಕಾದಾಡುತ್ತಾರೆ. ಆಗ ವಿಷ್ಣುವು ಮಾಟಗಾತಿ ಮೋಹಿನಿಯ ವೇಷದಲ್ಲಿ ಕಾಣಿಸಿಕೊಂಡು ಅಸುರರ ಮನಸ್ಸನ್ನು ಚಂಚಲಗೊಳಿಸುತ್ತಾನೆ. ಮೋಹಿನಿ ವೇಷದಲ್ಲಿದ್ದ ವಿಷ್ಣು ಅಮೃತವನ್ನು ದೇವತೆಗಳಿಗೆ ಮಾತ್ರ ಹಂಚುತ್ತಾನೆ. ಆದರೆ ರಾಹುಕೇತು ಎಂಬ ಒಬ್ಬ ಅಸುರನು ದೇವತೆಯ ಮಾರುವೇಷದಲ್ಲಿ ಅಮೃತವನ್ನು ಪಡೆದು ಅದನ್ನು ಸೇವಿಸಿಬಿಡುತ್ತಾನೆ. ಈ ಮೋಸವನ್ನು ಸೂರ್ಯ ಮತ್ತು ಚಂದ್ರ ದೇವತೆಗಳು ಕಂಡುಕೊಂಡು ವಿಷ್ಣುವನ್ನು ಎಚ್ಚರಿಸುತ್ತಾರೆ. ತಕ್ಷಣವೇ  ವಿಷ್ಣು ರಾಹುಕೇತು ರಾಕ್ಷಸನ ತಲೆಯನ್ನು ಕಡಿಯುತ್ತಾನೆ. ಆದರೆ ಅಮೃತ ಸೇವಿಸಿದ ಪ್ರಾಬಲ್ಯದಿಂದ ಅವನು ಸಾಯುವುದಿಲ್ಲ. ಅವನ ರುಂಡ ಮತ್ತು ಮುಂಡ ಬೇರೆಯಾಗಿ ರುಂಡವು ರಾಹು ಆಗಿಯೂ, ಮುಂಡವು ಕೇತುವಾಗಿಯೂ ಉಳಿದುಕೊಳ್ಳುತ್ತವೆ. ಸೂರ್ಯ ಮತ್ತು ಚಂದ್ರರಿಂದ ತಾವು ಈ ಸ್ಥಿತಿಗೆ ಬಂದಿದ್ದರಿಂದ ದ್ವೇಶ ತೀರಿಸಿಕೊಳ್ಳಲು ನಿಯತಕಾಲಿಕವಾಗಿ ಅವರನ್ನು ಕಬಳಿಸುತ್ತಿರುತ್ತಾರೆ. ಇವೇ ಖಗೋಳ ಶಾಸ್ತ್ರದಲ್ಲಿ ಗುರುತಿಸಿರುವ ಗ್ರಹಣಗಳು!

**೨೦೧೭ ರ ಗ್ರಹಣ:** ಆಗಸ್ಟ್ ೨೧, 2017 ರಲ್ಲಿ ಸಂಭವಿಸಿದ ಗ್ರಹಣ ಅಮೆರಿಕನ್ನರ ಕಲ್ಪನಾಶಕ್ತಿಯನ್ನು ಗರಿಗೆದರಿಸಿ ಪ್ರತಿಯೊಬ್ಬನನ್ನೂ ಹವ್ಯಾಸೀ ಖಗೋಳಶಾಸ್ತ್ರಜ್ಞನನ್ನಾಗಿ ಪರಿವರ್ತಿಸಿತು. ನೂರು ವರ್ಷಗಳಲ್ಲಿ ಇದೇ ಮೊದಲ ಬಾರಿ ಅಖಂಡ ಅಮೆರಿಕದಲ್ಲಿ ಪೂರ್ಣ ಸೂರ್ಯಗ್ರಹಣ ಓರೆಗಾಂ ನಿಂದ ಸೌತ್ ಕೆರೋಲಿನ ದ ಸಂಕುಚಿತ ಪಟ್ಟಿಯಲ್ಲಿ ಕಾಣಿಸಿಕೊಂಡಿತು. ಸಂಪೂರ್ಣ ಗ್ರಹಣದ ಪಥ ಸಂಕುಚಿತದ್ದಾದರೂ, ಅಮೆರಿಕ ಖಂಡದ ಎಲ್ಲ ಪರಿಸರಗಳಲ್ಲೂ  ಪಾರ್ಶ್ವ ಸೂರ್ಯಗ್ರಹಣವಾದರೂ ಕಾಣಿಸಿಕೊಂಡಿದೆ. ಬಹುಮಂದಿ ಗ್ರಹಣ ಬೇಟೆಗಾರರು ಪೂರ್ಣಗ್ರಹಣವನ್ನು ವೀಕ್ಷಿಸಲು ನೂರಾರು ಮೈಲಿ ಪ್ರಯಾಣ ಮಾಡಿದ್ದಾರೆ. ಪ್ರಪಂಚದ ನಾನಾ ಭಾಗಗಳಿಂದ ಈ ವಿಶೇಷ ಘಟನೆಯನ್ನು ವೀಕ್ಷಿಸಲು ಜನರ ಮಹಾಪೂರವೇ ಅಮೆರಿಕಕ್ಕೆ ಧಾವಿಸಿತ್ತು. ಸೂರ್ಯಗ್ರಹಣವು ಅದ್ಭುತವೂ ಹೌದು, ಅಪಾಯಕಾರಿಯೂ ಹೌದು. ಬರಿಗಣ್ಣಿನಲ್ಲಿ ಸೂರ್ಯನನ್ನು ನೋಡಲು ಹೊರಟರೆ ಕುರುಡಾಗುವ ಅಪಾಯವಿದೆ.  ಗ್ರಹಣವನ್ನು ವೀಕ್ಷಿಸಲು ವಿಶೇಷ ಗಾಜಿನ ಉಪಕರಣ ಬಿಸಿ ದೋಸೆಯಂತೆ ಮಾರಾಟವಾದುವು. ಒಂದೆರಡು ಡಾಲರ್ ಬೆಲೆಯ ಇವುಗಳನ್ನು ನೂರಾರು ಡಾಲರ್ ಗೆ ಈ-ಬೆ ಮುಂತಾದ ಅಂತರ್ಜಾಲ ತಾಣಗಳಲ್ಲಿ ಜಾಹೀರಾತು ಮಾಡಲಾಗಿತ್ತು. ಹಳೆಯ ಕಾಲದಲ್ಲಿ ಭಾರತದಲ್ಲಿ ಜನರು ಪೂರ್ವಸಿದ್ಧತೆಯಿಲ್ಲದೆ ಗ್ರಹಣ ವೀಕ್ಷಣಾ ಫಲಕವನ್ನು ಸುಲಭವಾಗಿ ತಯಾರಿಸುತ್ತಿದ್ದರು. ಒಂದು ಗಾಜಿನ ಪಟ್ಟಿಯನ್ನು ತೈಲದ ದೀಪದ ಮೇಲೆ ಮುಚ್ಚಿಟ್ಟು ಗಾಜನ್ನು ಮಸಿಕಪ್ಪುಗೊಳಿಸುತ್ತಿದ್ದರು. ನಂತರ ಆ ಮಸಿಗಟ್ಟಿದ ಗಾಜಿನ ಪಟ್ಟಿಯನ್ನು ಗ್ರಹಣ ವೀಕ್ಷಿಸಲು ಉಪಯೋಗಿಸುತ್ತಿದ್ದರು. ಇದು ಸಂಪೂರ್ಣ ಸುರಕ್ಷಿತವಾದುದೋ ತಿಳಿಯದು; ಆದರೆ ಖರ್ಚಿಲ್ಲದೆ ತ್ವರಿತವಾಗಿ ತಯಾರಿಸಬಹುದಾಗಿತ್ತು!



ಸೂರ್ಯ, ಚಂದ್ರ, ಮತ್ತು  ಭೂಮಿ ಸರಳ ರೇಖೆಯಲ್ಲಿ ರೂಪಗೊಂಡಾಗ ಗ್ರಹಣವು ಸಂಭವಿಸುತ್ತದೆ ಎಂಬುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ಸಂಗತಿ. ಹುಣ್ಣಿಮೆ ದಿನ ಭೂಮಿಯು ಸೂರ್ಯ ಮತ್ತು ಚಂದ್ರ ರ ನಡುವೆ ಬಂದಾಗ ಭೂಮಿಯ ನೆರಳಿನಿಂದ ಚಂದ್ರ ಗ್ರಹಣವಾಗುತ್ತದೆ. ಅಮಾವಾಸ್ಯೆಯ ದಿನ ಚಂದ್ರನು ಭೂಮಿ ಮತ್ತು ಸೂರ್ಯನ ನಡುವೆ ಬಂದಾಗ, ಸೂರ್ಯನು ನಮ್ಮ ದೃಷ್ಟಿಗೆ ಕಾಣದಂತಾಗಿ ಸೂರ್ಯ ಗ್ರಹಣ ಉಂಟಾಗುತ್ತದೆ, ಗ್ರಹಣವು ಪೂರ್ಣ ಅಥವ ಅಂಶಿಕ (ಭಾಗಶಃ) ಆಗಿರಬಹುದು. ಚಂದ್ರ ಗ್ರಹಣವು ಅಸ್ಪಷ್ಟವಾಗಿಯೂ (penumbral) ಇರಬಹುದು. ಗ್ರಹಗಳ ಚಲನೆಯಿಂದ ಬುಧ ಅಥವ ಶುಕ್ರ ಗ್ರಹಗಳು ಭೂಮಿಯಿಂದ ಸೂರ್ಯನ ವೀಕ್ಷಣೆಗೆ ಭಾಗಶಃ ಅಡ್ಡಿ ಒಡ್ಡಬಹುದು. ಇದು ಮತ್ತೊಂದು ರೀತಿಯ ಬಹಳ ಅಪರೂಪದ ಗ್ರಹಣ.

ಪ್ರತಿ ಅಮಾವಾಸ್ಯೆ ಅಥವ ಹುಣ್ಣಿಮೆ ದಿನದಂದು ಏಕೆ ಗ್ರಹಣ ಸಂಭವಿಸುವುದಿಲ್ಲ?  ಚಂದ್ರಗ್ರಹಣವು ಸೂರ್ಯಗ್ರಹಣಕ್ಕಿಂತ ಹೆಚ್ಚು ಆವರ್ತನ ಏಕೆ ಎಂಬುದು ಬಹು ಜನರಿಗೆ ತಿಳಿದಿರಲಾರದು. ಭೂಮಿಯು ಸೂರ್ಯನ ಸುತ್ತ, ಚಂದ್ರನು ಭೂಮಿಯ ಸುತ್ತ ಹೇಗೆ ಚಲಿಸುತ್ತವೆ ಹಾಗೂ ಅವುಗಳ ಪರಸ್ಪರ ಗಾತ್ರ - ಈ ಸೂಕ್ಷ್ಮಗಳಿಂದ ಇದಕ್ಕೆ ಉತ್ತರ ತಿಳಿಯಬಹುದು.  ಭೂಮಿಯು ಸೂರ್ಯನ ಸುತ್ತ ಚಲಿಸುವ ಕಕ್ಷೆ ಒಂದು ಸಮತಲವನ್ನು (plane) ಸೂತ್ರಿಸುತ್ತದೆ (ಒಂದು ಚಪ್ಪಟೆ ಕಾಗದದ ಹಾಳೆ ಇದ್ದಂತೆ) ಮತ್ತು ಚಂದ್ರನು ಭೂಮಿಯ ಸುತ್ತ ಚಲಿಸುವ ಕಕ್ಷೆ ಮತ್ತೊಂದು ಸಮತಲ, ಭೂಮಿಯ ಸಮತಲಕ್ಕೆ ಸುಮಾರು ೫° ಕೋನದಲ್ಲಿ ಬಾಗಿರುತ್ತದೆ. ಅಮಾವಾಸ್ಯೆಯಂದು ಸೂರ್ಯ ಮತ್ತು ಚಂದ್ರ ಎರಡೂ ಒಂದೇ ದಿಕ್ಕಿನಲ್ಲಿ (ಪೂರ್ವ ಎಂದಿಟ್ಟುಕೊಳ್ಳೋಣ) ಕಾಣುವುದರಿಂದ ಚಂದ್ರನ ಹಿಂಬಾಗ ಸೂರ್ಯನಿಂದ ಬೆಳಕನ್ನು ಪಡೆಯುತ್ತದೆ. ಆದರೆ ಭೂಮಿಯಿಂದ ನಮಗೆ ಕತ್ತಲಾಗಿ ಕಾಣುತ್ತದೆ. ಇದೇ ರೀತಿ ಹುಣ್ಣಿಮೆಯಂದು, ಚಂದ್ರ ಮತ್ತು ಸೂರ್ಯ ವಿರುದ್ಧ ದಿಕ್ಕಿನಲ್ಲಿ ಕಾಣುವುದರಿಂದ (ಸೂರ್ಯನು ಪೂರ್ವ, ಚಂದ್ರನು ಪಶ್ಚಿಮ ಎಂದುಕೊಳ್ಳೋಣ) ಚಂದ್ರನ ಪೂರ್ಣ ರೂಪ ಭೂಮಿಯಿಂದ ಪ್ರಕಾಶಮಾನವಾಗಿ ಕಾಣುತ್ತದೆ. ಆದರೆ ಇವುಗಳ ಪ್ರತ್ಯೇಕ ಉತ್ತರ-ದಕ್ಷಿಣ ನೆಲೆಗಳಿಂದ ಈ ಮೂರೂ ಗ್ರಹಗಳು ಸದಾ ಸರಳ ರೇಖೆಯಲ್ಲಿರುವುದಿಲ್ಲ. ಬಹುಪಾಲು ಅಮಾವಾಸ್ಯೆ ಮತ್ತು ಹುಣ್ಣಿಮೆ ದಿನಗಳಂದು ಗ್ರಹಣ ಸಾಧ್ಯವಾಗದಿರುವಿದು ಈ ಉತ್ತರ-ದಕ್ಷಿಣ ದಿಕ್ಕಿನ ಸರಳ ರೇಖೆಯ ಹೊಂದಿಕೆಯಿಲ್ಲದಿರುವುದೇ ಕಾರಣ.

**ಕೊಂಚ ಖಗೋಳ ಶಾಸ್ತ್ರ:** ಭೂಮಿಯು ಸೂರ್ಯನ ಸುತ್ತ ಚಲಿಸುತ್ತದೆಯದರೂ, ಸೂರ್ಯನು ಭೂಮಿಯ ಸುತ್ತ ಚಲಿಸುವಂತೆ ಯೋಚಿಸಬಹುದು. ಈ ಊಹಿತ ಕಕ್ಷೆಯನ್ನು ಎಕ್ಲಿಪ್ಟಿಕ್ ಎನ್ನುತ್ತಾರೆ; ಇದು ಒಂದು ಸಮತಲವನ್ನು ಗುರುತಿಸುತ್ತದೆ. ಭೂಮಿಯ ಸುತ್ತ ಚಲಿಸುವ ಚಂದ್ರನ ಪಥ ಒಂದು ಪೂರ್ಣ ಕಕ್ಷೆಯಾಗುವುದಿಲ್ಲ ಏಕೆಂದರೆ ಭೂಮಿಯೂ ಸಹ ಚಲಿಸುತ್ತಿರುತ್ತದೆ. ಆದಾಗ್ಯೂ, ಈ ಕಕ್ಷೆಯೂ ಒಂದು ಸಮತಲವನ್ನು ಗುರುತಿಸುತ್ತದೆ. ಚಂದ್ರನ ಚಲನೆಯ ಕಕ್ಷೆ ಎಕ್ಲಿಪ್ಟಿಕ್ ಅನ್ನು ಎರಡು ಬಿಂದುಗಳಲ್ಲಿ ಅಡ್ಡ ಹಾಯುತ್ತದೆ (ಛೇದಿಸುತ್ತದೆ). ಈ ಬಿಂದುಗಳನ್ನು ಚಾಂದ್ರಮಾನ ಗಂಟು (lunar node) ಎನ್ನುತ್ತಾರೆ. ದಕ್ಷಿಣದಿಂದ ಉತ್ತರಕ್ಕೆ ಚಲಿಸುವ ಚಂದ್ರನ ಕಕ್ಷೆ ಎಕ್ಲಿಪ್ಟಿಕ್ ಅನ್ನು ದಾಟುವ ಗಂಟನ್ನು ಆರೋಹಣ ಗಂಟು (ರಾಹು) ಮತ್ತು ಉತ್ತರದಿಂದ ದಕ್ಷಿಣಕ್ಕೆ ಚಲಿಸುವ ಕಕ್ಷೆ ದಾಟುವ ಗಂಟನ್ನು ಅವರೋಹಣ ಗಂಟು (ಕೇತು) ಎನ್ನುತ್ತಾರೆ. ಗ್ರಹಣವು ಸಂಭವಿಸಬೇಕಾದರೆ ಎರಡು

(ಮುಂದಿನ ಪುಟಕ್ಕೆ)


Copyright © KCO – Brindavana

## *ಗ್ರಹಣ(ಗಳು)*

(ಹಿಂದಿನ ಪುಟದಿಂದ)

ಕಟ್ಟುಪಾಡುಗಳು ಪೂರೈಸಬೇಕಾಗುತ್ತದೆ: ಚಂದ್ರನು ಯಾವುದಾದರೂ ಒಂದು ಚಾಂದ್ರಮಾನ ಗಂಟಿನಲ್ಲಿರಬೇಕು ಮತ್ತು ಆ ವೇಳೆಯಲ್ಲಿ ಹುಣ್ಣಿಮೆ ಅಥವ ಅಮಾವಾಸ್ಯೆಯಾಗಿರಬೇಕು. ಚಂದ್ರನು ಚಾಂದ್ರಮಾನ ಗಂಟಿನಲ್ಲಿದ್ದಾಗ ಹುಣ್ಣಿಮೆ ಅಥವ ಅಮಾವಾಸ್ಯೆಯ ಸಾಧ್ಯತೆ ಒಂದೇ ಇರುತ್ತದೆ.  ಹಾಗಾಗಿ ಸೂರ್ಯಗ್ರಹಣ ಹಾಗೂ ಚಂದ್ರಗ್ರಹಣ ಎರಡರ ಸಾಧ್ಯತೆಯೂ ಒಂದೇ ಇರುತ್ತದೆ. ಆದರೆ ಭೂಮಿ ಮತ್ತು ಚಂದ್ರ ರ ಗಾತ್ರ ವ್ಯತ್ಯಾಸಗಳಿಂದ ಈ ಎರಡು ಗ್ರಹಣಗಳ ಸಾಧ್ಯತೆಗಳು ಬದಲಾಗುತ್ತವೆ.

ಕಕ್ಷೆ ಅಥವ ಸಮತಲದ ಬಗ್ಗೆ ಚಿಂತಿಸುವಾಗ, ಸೂರ್ಯ, ಭೂಮಿ, ಮತ್ತು ಚಂದ್ರ ಇವುಗಳನ್ನು ಗಾತ್ರವಿಲ್ಲದ ಬಿಂದುಗಳೆಂದು ಪರಿಗಣಿಸುವುದರಿಂದ, ಹುಣ್ಣಿಮೆ ಮತ್ತು ಅಮಾವಾಸ್ಯೆಗಳನ್ನುಶೂನ್ಯ ಸಮಯದ  ಕ್ಷಣಿಕ ಘಟನೆಗಳನ್ನಾಗಿಸುತ್ತವೆ. ಆದರೆ ವಾಸ್ತವದಲ್ಲಿ ಇವುಗಳು ಬಹು ವಿಸ್ತೃತ ವಸ್ತುಗಳಾದ್ದರಿಂದ ಗ್ರಹಣಗಳು ಕ್ಷಣಿಕವಾಗಿರದೆ ಸ್ವಲ್ಪ ಕಾಲ ಇರುತ್ತವೆ. ಈ ವಿಸ್ತೃತ ಗಾತ್ರ ಭೌಗೋಳಿಕ ವಾಗಿಯೂ ವ್ಯತ್ಯಾಸ ವನ್ನು ಮಾಡುತ್ತವೆ. ಸೂರ್ಯ, ಭೂಮಿ, ಮತ್ತು ಚಂದ್ರ ಒಂದೇ ಸರಳ ರೇಖೆಯ ಸ್ಥಾನದಲ್ಲಿ ರಚನೆಗೊಂಡರೆ, ಒಂದೇ ಬಗೆಯ ಗ್ರಹಣವು ಸಂಭವಿಸುತ್ತದೆ. ಇದು ನಿಯತಕಾಲಿಕವಾಗಿ ಸಂಭವಿಸುತ್ತದೆ.  ಈ ನಿಯತಕಾಲದ ಅವಧಿಗೆ 'ಸಾರೋಸ್' ಎನ್ನುತ್ತಾರೆ. ಅತ್ಯಂತ ಖ್ಯಾತ 'ಸಾರೋಸ್' ಅನ್ನು ಬೇಬಿಲೋನಿನ ಚಾಲ್ಡಿಯನ್ಸ್ ರಿಗೆ ಗುರುತಿಸಿದ್ದಾರೆ. ಇದರ ಅವಧಿ ೬೫೮೫.೩೨ ದಿನಗಳು (೧೮ ವರ್ಷ, ೧೧/೧೦ ದಿನ, ೮ ಗಂಟೆ). ಈ ಅವಧಿ ಮೂರು ಪ್ರತ್ಯೇಕ ಚಾಂದ್ರಮಾನ ಅವಧಿಗಳ ಲಘುತ್ತಮ ಸಾಮಾನ್ಯ ಅಪವರ್ತನ - ಲ. ಸಾ. ಅ (LCM).  ಆಗಸ್ಟ್ ೨೧, ೨೦೧೭ ರಂದು ಸಂಭವಿಸಿದ ಗ್ರಹಣ ಸಾರೋಸ್ #೧೪೫ ಕ್ಕೆ ಸಂಬಂಧಿಸಿದ್ದಾಗಿದೆ. ಈ ಸರಣಿಗೆ ಸೇರಿದ ಮುಂದಿನ ಗ್ರಹಣ ಸೆಪ್ಟೆಂಬರ್ ೦೨, ೨೦೩೫ ರಲ್ಲಿ ಆಗಲಿದೆ ಮತ್ತು ಇದರ ಹಿಂದಿನದು ಆಗಸ್ಟ್ ೧೧, ೧೯೯೯ ರಲ್ಲಿ ಸಂಭವಿಸಿದೆ. ೧೯೯೯ ರಲ್ಲಿನ ಗ್ರಹಣ ಮಧ್ಯ ಯೂರೋಪ್ ನಲ್ಲಿ ಕಾಣಿಸಿಕೊಂಡಿದ್ದರೆ, ೨೦೩೫ ರಲ್ಲಿ ಸಂಭವಿಸುವ ಗ್ರಹಣ ಈಶಾನ್ಯ ಚೀನ ಮತ್ತು ಪಸಿಫಿಕ್ ಪ್ರದೇಶಗಳಲ್ಲಿ ಕಾಣಿಸಿಕೊಳ್ಳಲಿದೆ. ಜುಲೈ ೧೦, ೧೯೭೨ ರಂದು ಸಂಭವಿಸಿದ ಗ್ರಹಣ ( ೨೦೧೭ ಕ್ಕಿಂತ ೩ ಆವರ್ತ ಹಿಂದಿನದು) ೨೦೧೭ ರ ಸಮಾನಾಂತರ ಪಥದಲ್ಲಿದ್ದು ಅಲಾಸ್ಕ ಮತ್ತು ಕೆನಡ ಪ್ರದೇಶಗಳ ಮೂಲಕ ಹಾಯ್ದು ಹೋಯಿತು.

**ಚಂದ್ರಗ್ರಹಣ:** ಚಂದ್ರಗ್ರಹಣವು ಭೂಮಿಯ ನೆರಳಿನಿಂದ ಉಂಟಾಗುತ್ತದೆ. ಭೂಮಿಯು ಚಂದ್ರನ ಸೀಳುನೋಟದ ವಿಸ್ತೀರ್ಣಕ್ಕಿಂತ (cross-sectional area) ೧೩ ಪಟ್ಟು ಹೆಚ್ಚಾಗಿರುವುದರಿಂದ, ಇದರ ನೆರಳಿನ ವಿಸ್ತೀರ್ಣವೂ ಚಂದ್ರನ ನೆರಳಿಗಿಂತ ಸಾಕಷ್ಟು ವಿಶಾಲವಾಗಿದ್ದು, ಚಂದ್ರಗ್ರಹಣವನ್ನು ವ್ಯಾಪಕವಾಗಿಯೂ, ಹೆಚ್ಚು ಸಾಮಾನ್ಯವಾಗಿಯೂ ಕಾಣಬಹುದು. ಪೂರ್ಣ ಚಂದ್ರಗ್ರಹಣವನ್ನೂ ಸಹ. ಮುಖ್ಯವಾಗಿ ಗ್ರಹಣದ ಸಮಯದಲ್ಲಿ ಚಂದ್ರನ ಗೋಚರತೆಯ ಸೀಮಿತದಿಂದ ಭೌಗೋಳಿಕವಾಗಿ ವ್ಯತ್ಯಾಸಗಳನ್ನು ಕಾಣಬಹುದು. ಸೂರ್ಯನ ಬೆಳಕು ವಿಸ್ತೃತವಾಗಿರುವುದರಿಂದ, ಚಂದ್ರನ ಪೂರ್ಣ ಮುಖಕ್ಕೆ ಸೂರ್ಯನ ವಿವಿಧ ಭಾಗಗಳಿಂದ ಬೆಳಕು ಬೀರಲ್ಪಡಬಹುದು; ಹಾಗೆಯೇ ಕೆಲವು ಭಾಗಗಳಿಂದ ವಂಚಿತವಾಗಲೂ ಬಹುದು. ಅಂತಹ ಸಂದರ್ಭದಲ್ಲಿ ಚಂದ್ರನು ಕಪ್ಪು ನೆರಳಾಗಿ ಕಾಣದೆ ಕಡಿಮೆ ಪ್ರಕಾಶಮಾನವಾಗಿ ಕಾಣಬಹುದು. ಇಂತಹ ಗ್ರಹಣವನ್ನು ಪೆನಂಬ್ರಲ್ ಗ್ರಹಣ ಎನ್ನುತ್ತಾರೆ. ಚಂದ್ರಗ್ರಹಣವು ಸಾಮಾನ್ಯವಾದರೂ, ಖಗೋಳ ಶಾಸ್ತ್ರದ ಘಟನೆಯಾಗಿ ಅಷ್ಟೇನೂ ಪ್ರಚೋದನಕಾರಿಯಲ್ಲ.

**ಸೂರ್ಯ ಗ್ರಹಣ:** ಭೂಮಿಯಿಂದ ವೀಕ್ಷಿಸಿದಾಗ ಸೂರ್ಯ ಮತ್ತು ಚಂದ್ರರ ಕೋನೀಯ ವ್ಯಾಸ ಸುಮಾರು ಒಂದೇ ಆಗಿರುವುದರಿಂದ, ಅವೆರಡೂ ಒಂದೇ ಗಾತ್ರವಾಗಿ ಕಾಣುತ್ತವೆ. ಭೂಮಿ ಮತ್ತು ಚಂದ್ರ ಗ್ರಹಗಳ ಅಂತರ ಅದರ ಸರಾಸರಿಯ ಸುತ್ತಮುತ್ತ ಶೇಕಡ ೫ ರಷ್ಟು ಬದಲಾವಣೆ ಇರುತ್ತದೆ. ಚಂದ್ರನು ಭೂಮಿಗೆ ಹೆಚ್ಚು ಸಮೀಪದಲ್ಲಿದ್ದಾಗ ಅದರ ಕೋನೀಯ ವ್ಯಾಸ ಸೂರ್ಯನದ್ದಿಕ್ಕಿಂತ ಹೆಚ್ಚಾಗಿರುವುದರಿಂದ ಸೂರ್ಯ ಗ್ರಹಣದ ಸಾಧ್ಯತೆ ಇರುತ್ತದೆ. ಚಂದ್ರನು ಭೂಮಿಗೆ ದೂರವಾದಾಗ, ಪೂರ್ಣ ನೇರರೇಖೆಯಲ್ಲಿದ್ದರೂ ಸಹ, ಸೂರ್ಯನಿಗಿಂತ ಸಣ್ಣದಾಗಿ ಕಾಣುತ್ತದೆ ಹಾಗೂ ಸೂರ್ಯನನ್ನು ಪೂರ್ಣವಾಗಿ ಮುಸುಕಲು ಸಾಧ್ಯವಾಗುವುದಿಲ್ಲ; ಆಗ ಆನ್ಯುಲಾರ್ ಗ್ರಹಣ ಸಂಭವಿಸುತ್ತದೆ. ಇದನ್ನು ಬೆಂಕಿಯ ಉಂಗುರ ಎನ್ನುತ್ತಾರೆ - ಸೂರ್ಯನು ಒಂದು ತೆಳುವಾದ ಹೊಳೆಯುವ ಉಂಗುರವಾಗಿ ಕಾಣುತ್ತಾನೆ. ಪೂರ್ಣ ಅಥವ ಆನ್ಯುಲಾರ್ ಸೂರ್ಯಗ್ರಹಣ ಸಂಭವಿಸಬೇಕಾದರೆ, ಸೂರ್ಯ, ಚಂದ್ರ, ಮತ್ತು ಭೂಮಿಯ ಒಂದು ಭಾಗ ಇವುಗಳ ಸಮಾನ ರೇಖೆಯ ಜೋಡಣೆ ಅತ್ಯಂತ ಸಮರ್ಪಕವಾಗಿರಬೇಕಾದುದರಿಂದ, ಇಂತಹ ಗ್ರಹಣವು ಭೂಮಿಯ ಪರಿಮಿತ ಪ್ರದೇಶದಿಂದ ಮಾತ್ರ ಕಾಣಲು ಸಾಧ್ಯ. ಇಂತಹ  ಪರಿಮಿತಿಯನ್ನು ದಾಟುತ್ತಿದ್ದಂತೆ ಗ್ರಹಣವು ಪಾರ್ಶ್ವವಾಗಿಯೂ, ಕೊನೆಗೆ ಕಾಣದಾಗಿಯೂ ಆಗುತ್ತದೆ. ಸಾಮಾನ್ಯವಾಗಿ ಸೂರ್ಯಗ್ರಹಣವು ಪಾರ್ಶ್ವಗ್ರಹಣ. ಭೌಗೋಳಿಕ ಪ್ರದೇಶವು ನಿರ್ಣಾಯಕ ಪಾತ್ರ ವಹಿಸುವುದರಿಂದ, ಸೂರ್ಯಗ್ರಹಣವು ಅಷ್ಟು ಸಾಮಾನ್ಯವಾಗಿ ಸಂಭವಿಸುವುದಿಲ್ಲ. ಆಗಸ್ಟ್ ೨೧, ೨೦೧೭ರ  ಪುರ್ಣಗ್ರಹಣದ ಪಥ ಸುಮಾರು ೭೦ ಮೈಲಿಯ ಕಿರಿದಾದ ಪಟ್ಟಿಯಲ್ಲಿ ಓರೆಗಾಂ ನಿಂದ ಸೌತ್ ಕೆರೊಲೀನ ವರೆಗೆ ಸಂಭವಿಸಿತು.

**ಇತರೆ ಗ್ರಹಣಗಳು:** ಬುಧ ಮತ್ತು ಶುಕ್ರ ಮುಂತಾದ ಅಂತರಿಕ ಗ್ರಹಗಳೂ ಸಹ ಸೂರ್ಯ ಮತ್ತು ಭೂಮಿಯ ಮಧ್ಯೆ ಬಂದಾಗ ಸೂರ್ಯನ ಒಂದು ಸಣ್ಣ ಭಾಗವನ್ನು ತಡೆಯಬಹುಸು. ಇವು ಒಂದು ಶತಮಾನದಲ್ಲಿ ಕೆಲವು ಬಾರಿ ಮಾತ್ರ ಸಂಭವಿಸುವಂತಹ ಅಪರೂಪದ ಘಟನೆಗಳು. ಈ ಘಟನೆಗಳನ್ನು ಬುಧ ಅಥವ ಶುಕ್ರನ ಸಂಚಾರ (transit) ಎನ್ನುತ್ತಾರೆ. ಇಂತಹ ಸಂಚಾರ ಘಟನೆಯನ್ನು ಸೌರ ಫಿಲ್ಟರ್ ಹೊಂದಿರುವ ದೂರದರ್ಶಕದ ಮೂಲಕ ವೀಕ್ಷಿಸುವುದು ಒಂದು ಅದ್ಭುತವೇ ಸರಿ! ಗಂಟೆಗಳ ಕಾಲ ಒಂದು ಸಣ್ಣ ಕಪ್ಪು ಚುಕ್ಕೆಯು ಸೂರ್ಯನ ಪರಧಿಯಲ್ಲಿ ಸುತ್ತುವುದನ್ನು ಕಾಣಬಹುದು. ಮುಂದಿನ ಬುಧ ಸಂಚಾರ ನವೆಂಬರ್ ೧೧, ೨೦೧೯ ರಲ್ಲಿ ಸಂಭವಿಸಲಿದೆ; ಈ ಶತಮಾನದಲ್ಲಿ ಶುಕ್ರ ಸಂಚಾರ ಸಾಧ್ಯವಿಲ್ಲ. ಜೂನ್ ೫/೬, ೨೦೧೨ ರಲ್ಲಿ ಇದರ ಹಿಂದಿನ ಶುಕ್ರ ಸಂಚಾರ ಸಂಬವಿಸಿತ್ತು.

**ಭವಿಷ್ಯದ ಸೂರ್ಯಗ್ರಹಣಗಳು:** ಏಪ್ರಿಲ್ ೮, ೨೦೨೪ ರಂದು ಅಮೆರಕದಲ್ಲಿ ಮುಂದಿನ ಪ್ರಮುಖ ಸೂರ್ಯಗ್ರಹಣ ಸಂಭವಿಸಲಿದೆ. ಇದು ೨೦೧೭ ರಲ್ಲಿ ಸಂಭವಿಸಿದ ಗ್ರಹಣವನ್ನು ಹೋಲುತ್ತದೆಯಾದರೂ, ಇದರ ಪಥ ಮಧ್ಯ ಮೆಕ್ಸಿಕೊ ದಿಂದ ಮೇಯ್ನ್ ವರೆಗೂ ಟೆಕ್ಸಾಸ್, ಅರ್ಕನ್ಸ, ಮಿಸ್ಸೋರಿ, ಇಂಡಿಯಾನ, ಒಹೈಒ, ಮತ್ತು ನ್ಯೂಯಾರ್ಕ್ ಮೂಲಕ ಚಲಿಸುತ್ತದೆ. ಪೆನ್ಸಿಲ್ವೇನಿಯ, ವೆರ್ಮಾಂಟ್, ಮತ್ತು ನ್ಯೂಹ್ಯಾಂಪ್ಶೈರ್ ಗಳನ್ನೂ ಮುಟ್ಟಬಹುದು. ಭಾರತೀಯರ ಆಸಕ್ತಿಯನ್ನು ಕೆರಳಿಸಬಹುದಾದ ಮತ್ತೊಂದು ಗ್ರಹಣ, ಡಿಸೆಂಬರ್ ೨೬, ೨೦೧೯ ರಲ್ಲಿ ಸಂಭವಿಸಲಿರುವ ಆನ್ಯುಲಾರ್ ಸೂರ್ಯಗ್ರಹಣ. ಇದನ್ನು ತಮಿಳ್ನಾಡಿನಲ್ಲಿ ವೀಕ್ಷಿಸಬಹುದಾಗಿದೆ. ಇದು ಭಾರತೀಯರು ಭಾರತಕ್ಕೆ ಭೇಟಿ ಮಾಡಲು ಒಲವಿನ ಕಾಲವಾದ್ದರಿಂದ, ಇದಕ್ಕಿಂತ ಉತ್ತಮ ಕಾಲವನ್ನು ನಿರೀಕ್ಷಿಸುವುದು ಅಸಂಭವ. ಗ್ರಹಣದ ಬೇಟೆಯ ಶುಭಾಶಯಗಳು!

***

***Sri M. R. Dwarakanath** is a physicist/ Electrical Engineer who likes to dabble in Vedanta, Sanskrit and Science / Philosophy. He lives in Warren, NJ.*

***ಶ್ರೀ ತ. ನಂ. ರಾಜಶೇಖರ** ತ್ರಿವೇಣಿ ಕನ್ನಡ ಸಂಘದ ಅಧ್ಯಕ್ಷರಾಗಿ ಮತ್ತು ಕನ್ನಡ ಸಾಹಿತ್ಯ ರಂಗದ ಮೊದಲ ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಕೆಲವು ಲೇಖನಗಳು ಸಾಹಿತ್ಯ ರಂಗದ ಮತ್ತು ಅಕ್ಕ ವಿಶ್ವ ಸಮ್ಮೇಳನದ ಪ್ರಕಟಣೆಗಳಲ್ಲಿ ಪ್ರಕಟಗೊಂಡಿವೆ.  ಇವರು ಕ್ಲೆಮೆಂಟನ್, ನ್ಯೂಜೆರ್ಸಿಯಲ್ಲಿ ವಾಸವಾಗಿದ್ದಾರೆ.*


Copyright © KCO – Brindavana

ಸಂಚಿಕೆ
೧೨
ಸೆಪ್ಟೆಂಬರ್, ೨೦೧೨

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಕಥಾ ಸಮಯ

### *ಚಿಗಲಿ-ತಂಬಿಟ್ಟು*



ಅನಿಲ್ ಭಾರದ್ವಾಜ

'**ಶೇ**ಷು, ಸ್ಕೂಲ್ ಗೆ ಹೋಗೋಕ್ಕೆ ಹೊತ್ತಾಗತ್ತೆ. ಬೇಗ ಏಳು. ಈವತ್ತು ನಾಗರ ಪಂಚಮಿ. ನಾಗಪ್ಪನಿಗೆ ಪೂಜೆ ಮಾಡಬೇಕು,' ಅಮ್ಮ, ವತ್ಸಲಾ, ಮಗನಾದ ಶೇಷಧರನನ್ನು ಮೆಲ್ಲಗೆ ಕೂಗಿ, ಎಚ್ಚರಿಸಲು ಪ್ರಯತ್ನಿಸುತ್ತಿದ್ದಳು. 'ಕರಾಗ್ರೇ ಹೇಳಿ, ಬಲಮೊಗ್ಗಲಲ್ಲಿ ಏಳು ಗುಂಡು.'

ಶ್ರಾವಣ ಮಾಸ, ಹಬ್ಬಗಳ ಮಾಸ. ಭೀಮನ ಅಮಾವಾಸ್ಯೆಯ ಆಚರಣೆಯಿಂದ ಆಷಾಢ ಮಾಸಕ್ಕೆ ಮಂಗಳ ಹಾಡಿ, ಶ್ರಾವಣ ಮಾಸ ಶುರುವಾದರೆ, ಒಂದು ತಿಂಗಳ 'ಹಬ್ಬದ ಸಾಲು' ಮನೆಮನೆಗಳಲ್ಲಿ ಸಂಭ್ರಮ ತುಂಬಿ ಹರಿಯುತ್ತದೆ. ನಾಗರ ಚೌತಿ-ನಾಗರ ಪಂಚಮಿಯ ಜೋಡಿ ಹಬ್ಬ,ಈ ತಿಂಗಳ ಹಬ್ಬಕ್ಕೆ ಹರಿಕಾರನಾಗಿ ಬರುತ್ತದೆ. ನಾಗರ ಚೌತಿಯಂದು ಮನೆಯ ಹಿರಿಯರು ನಾಗಪ್ಪನಿಗೆ ತನಿ ಎರೆದರೆ, ಮನೆಯವರೆಲ್ಲಾ ತನಿ ಎರೆಯುವುದು ಪಂಚಮಿಯಂದು. ಹಿಂದೂ ಧರ್ಮದಲ್ಲಿ ನಾಗ ದೇವತೆಗಳಿಗೆ ಬಹಳ ಪ್ರಾಧಾನ್ಯವಿದೆ. ಅವರು ಸಂತಾನ ಭಾಗ್ಯ, ಆರೋಗ್ಯ, ಶಾಂತಿ ಇತರ ಸದ್ಗತಿಗಳನ್ನು ಕೊಡುವವರು ಎಂಬುವ ನಂಬಿಕೆ. ಈ ನಂಬಿಕೆ ಇರುವವರು, ಆ ದಿನ ನಾಗಪ್ಪನ ಪೂಜೆ ಬಹಳ ಭಯ-ಭಕ್ತಿಯಿಂದ ಆಚರಿಸುತ್ತಾರೆ. ಬೆಳಗಾಗುವ ಮುನ್ನ ಎದ್ದು, ತಲೆಯ ಮೇಲೆ ಸ್ನಾನ ಮಾಡಿ, ಒದ್ದೆ ಬಟ್ಟೆ ಉಟ್ಟು, ಪೂಜಾ ಸಾಮಗ್ರಿಗಳನ್ನು ಅಣಿಮಾಡಿಕೊಂಡು, ಬೆಳ್ಳಿ ಅಥವಾ ಇತರ ಲೋಹದಿಂದ ನಿರ್ಮಿಸಿರುವ, ಹೆಡೆ ಬಿಚ್ಚಿರುವ ನಾಗಪ್ರತಿಮೆಯನ್ನು ಸ್ಥಾಪಿಸಿ, ಅದಕ್ಕೆ ಶುದ್ಧೋದಕ ಮತ್ತು ಹಾಲಿನ ಅಭಿಷೇಕ ಮಾಡಿ, ಅರಿಶಿನ ಹಚ್ಚಿದ ಗೆಜ್ಜೆವಸ್ತ್ರ ಏರಿಸಿ, ಚಿಗಲಿ ಮತ್ತು ತಂಬಿಟ್ಟನ್ನು ಅರ್ಪಿಸಿ, ವಿವಿಧ ಹಣ್ಣುಗಳಿಂದ ನೈವೇದ್ಯ ಮಾಡಿ, ಇಷ್ಟಾರ್ಥಗಳನ್ನು ಬೇಡಿ ನಮಸ್ಕರಿಸುವುದು ವಾಡಿಕೆ. ಕೆಲವರು ಅಶ್ವತ್ಥ ವೃಕ್ಷದ ಕೆಳಗೆ ಸ್ಥಾಪಿಸಿರುವ ನಾಗರಕಲ್ಲುಗಳಿಗೆ ಹೋಗಿ ಈ ಪೂಜೆಗಳನ್ನು ಸಲ್ಲಿಸುವುದೂ ಉಂಟು. ಅಲ್ಲದೆ, ಸಹೋದರಿಯರು ತಮ್ಮ ಸಹೋದರರು ಸುಖವಾಗಿ (ತಂಪಾಗಿ) ಇರಲೆಂದು ಅವರ ಬೆನ್ನಿಗೆ ಹಾಲು-ತುಪ್ಪ ಹಚ್ಚಿ, ಉಡುಗೊರೆ ಕೊಡುಕೊಳುವ ಸಂಪ್ರದಾಯವೂ ಇದೆ. ಸಹೋದರಿಯರಿಗೆ ತವರಿನ ಚಿಗಲಿ-ತಂಬಿಟ್ಟು ಸಹೋದರರು ನೀಡುತ್ತಾರೆ. ಈ ಎಲ್ಲದರಲ್ಲಿ, ಬಹುತೇಕ ಜನರಿಗೆ ಅಚ್ಚುಮೆಚ್ಚಿನ ಭಾಗ ಚಿಗಲಿ ಮತ್ತು ತಂಬಿಟ್ಟು.



'ನಾನು ನಾಗಪ್ಪನ ಪೂಜೆನೂ ಮಾಡಲ್ಲ ಏನೂ ಮಾಡಲ್ಲ..
ನನಗೆ ಈ ಹಬ್ಬ ಅಂದ್ರೆ ಇಷ್ಟ ಇಲ್ಲ,'

'ಹಾಗೆಲ್ಲಾ ಮಾತಾಡಬಾರದು. ಛಕ್ಕಂತ ತಲೆ ಸ್ನಾನ ಮಾಡಿ, ಅಲ್ಲೇ ಮೂಲೇಲಿ ಇಟ್ಟಿರೋ ಒದ್ದೆ ಶಲ್ಯ ಉಟ್ಕೊಂಡು ಬಾ. ಪೂಜೆ ಮಾಡಿದ ತಕ್ಷಣ ತಿಂಡಿ ಕೊಡ್ತೀನಿ,' ಕೊಸರಾಡಿದಳು ವತ್ಸಲಾ. 'ಅಜ್ಜಿ ಬಿಸಿ-ಬಿಸಿ ತಂಬಿಟ್ಟು ಮಾಡ್ತಿದಾರೆ. ಬೇಗ ಬಂದ್ರೆ ಅದೂ ಕೊಡ್ತಾರೆ.'

'ನಂಗೆ ತಂಬಿಟ್ಟು ಬೇಡ, ಏನೂ ಬೇಡ,' ಸಿಟ್ಟಿನ ಉತ್ತರ ಕೊಟ್ಟನು ಶೇಷು.

ಶೇಷಧರ ಐದನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿ. ಅವನಿಗೊಬ್ಬಳು ಏಳು ವರ್ಷದ ತಂಗಿ, ಶುಭದಾ. ಕೆಲವು ವರ್ಷದ ತಡವಾಗಿಯೇ, ಕುಕ್ಕೆ ಸುಬ್ರಮಣ್ಯ, ಮಂತ್ರಾಲಯ, ತಿರುಪತಿ, ಸೋದೆ ಇನ್ನಿತರ ತೀರ್ಥಕ್ಷೇತ್ರಗಳ ದೇವರ ಹರಕೆ-ಹೋಮಗಳ ನಂತರ ಜನಿಸಿದ ತಲೆಮಾರಿನ ಮೊದಲ ಶಿಶು ಶೇಷು. ಮನೆಯ ಪದ್ಧತಿಯಂತೆ, ಮೊದಲ ಮಗುವಿಗೆ ನಾಗಪ್ಪನ ಹೆಸರಿಡಲಾಗಿತ್ತು. ಚೊಚ್ಚಲ ಮಗುವಾದ್ದರಿಂದ ಅಜ್ಜಿ-ತಾತ, ಚಿಕ್ಕಪ್ಪ, ಸೋದರತ್ತೆ ಮೊದಲಾದವರ ಲಾಲನೆಯಿಂದ ಶೇಷು ಬೆಳೆದಿದ್ದ. ಶುಭದಾಳ ಆಗಮನ ಅವನ ಮೇಲೆ ಸ್ವಲ್ಪ ಪರಿಣಾಮ ಬೀರಿದ್ದರೂ, ಶೇಷು ಅವಳೊಂದಿಗೆ ಕಡಿಮೆ ಕಾಲಾವಧಿಯಲ್ಲಿ ಹೊಂದಿಕೊಂಡದ್ದು ಕಂಡು ಎಲ್ಲರಿಗೂ ಅಚ್ಚರಿಯಾಗಿತ್ತು.

ಹತ್ತು-ಹನ್ನೊಂದರ ವರ್ಷದ ಮಕ್ಕಳ ಮನಸ್ಸು ಸ್ವಲ್ಪಮಟ್ಟಿಗೆ ನಿರಂತರ ಪರಿವರ್ತನೆಯ ಅವಸ್ಥೆಯಲ್ಲಿರುತ್ತದೆ. ಪುಟ್ಟ ಮಗುವಿನ ಲೆಕ್ಕಕ್ಕೂ ಬರುವುದಿಲ್ಲ, ಹದಿವಯಸ್ಸಿನ ಮಕ್ಕಳಂತೆ ವರ್ತಿಸುವುದೂ ಇಲ್ಲ. ಮಗುವಿನ ಮುಗ್ಧತೆ, ತಿಳಿಮನಸ್ಸು ಬಹುತೇಕ ಕಳೆದುಕೊಂಡು, ಸುತ್ತಲಿನ ಪ್ರಪಂಚದ ಅರಿವು, ಅದರ ನ್ಯೂನತೆಯ ರೇಖೆಗಳನ್ನು ಗುರುತಿಸುವ ಎಚ್ಚಮೆ ಗಳಿಸಿ, ಅದಕ್ಕೆ ಹೇಗೆ ಪ್ರತಿಸ್ಪಂದಿಸಬೇಕೆಂಬುದು ತಿಳಿಯದ ಬಿಕ್ಕಟ್ಟಿನಲ್ಲಿರುವ ಜೀವನದ ಒಂದು ವಿಚಿತ್ರ ಘಟ್ಟ.ಜೊತೆಗೆ, ಆ ಮಗುವೇನಾದರೂ ಜ್ಯೇಷ್ಠ ಮಗುವಾಗಿದ್ದರೆ, ಅದರ ಪಾಡು ಹೇಳತೀರದು. ತಂದೆ-ತಾಯಿರನ್ನು ಒಳಗೊಂಡು, ಸಮಾಜ ಆ ಎಳೆಯ ಮಗುವನ್ನು ಅಕಾಲಿಕವಾಗಿ ಪಕ್ವ ಮಾಡಿಬಿಡುತ್ತದೆ. "ನೀನು ದೊಡ್ಡವನು, ಎಳೇ ಮಗು ತರ ಆಡ್ಬೇಡ!",

"ಅವನೇನೋ ಚಿಕ್ಕ ಮಗು. ಹಠ ಮಾಡ್ತಾನೆ. ನೀನು ದೊಡ್ಡ ಕತ್ತೆ ಆಗಿದೀಯ. ಅವನಿಗೆ ಸ್ವಲ್ಪ ಆಡಕ್ಕೆ ಕೊಡಕ್ಕೇನು?" ಈ ರೀತಿಯ ಹೇಳಿಕೆಗಳು ಆ ಕೋಮಲ ಮನಸ್ಸಿಗೆ ಲಗ್ಗೆ ಹಾಕುತ್ತದೆ. ಇಷ್ಟು ಸಾಲದೆಂಬಂತೆ, ಸಮಾನ-ವ್ಯಕ್ತಿಗಳ ದೈಹಿಕ, ಉಡುಪಿನ, ನಡವಳಿಕೆಯ ಪ್ರಜ್ಞೆ ಕಾಣಲಾರಂಭಿಸುತ್ತದೆ. ಅಂತಹುದೇ ಒಂದು ಮಾನಸಿಕ ಸಂಘರ್ಷ ಶೇಷುವಿನ ಆ ದಿನದ ಬಂಡಾಯಕ್ಕೆ ಕಾರಣವಾಗಿತ್ತು.

ಅಂದು ಹಾಸಿಗೆಯ ಅಂಚಿನಲ್ಲಿ ತಲೆತಗ್ಗಿಸಿ ಕೂತು ಸೊರಗುಟ್ಟುತ್ತಿದ್ದ ಶೇಷು. ಏಳುವಾಗ ಹೆಚ್ಚಾಗಿ ಆಹ್ಲಾದಕರ ಮನಃಸ್ಥಿತಿ ತೋರಿಸುವ ಮಗು, ಅಂದು ಅಷ್ಟು ಕ್ಷೋಭಿತವಾಗಿರುವುದು ಗಮನಿಸಿ, ವತ್ಸಲಾ ಕೊಠಡಿಯ ಒಳಗೆ ಹೋಗಿ ಮಗುವಿನ ಮೊಗ್ಗಲಲ್ಲಿ ನಿಂತು, ಅದರ ಮುಖದ ಸಮೀಪ ತನ್ನ ಮುಖ ಇಟ್ಟಳು. ಆ ಕಂದನ ಅಡಗಿಸಿದ್ದ ಅಳುವಿನ ಕಣ್ಣೀರು ಕೆಂಬಣ್ಣವಾದ ಕೆನ್ನೆಯ ಮೇಲೆ ಧಾರಾಕಾರವಾಗಿ ಹರಿಯುತ್ತಿತ್ತು. ವಿಷಯವೇನೆಂದು ತಿಳಿಯದೆ ಗಾಬರಿಗೊಂಡ ವತ್ಸಲಾ, ಪೂಜೆಗೆಂದು ಮಡಿ ಬಟ್ಟೆಯಲ್ಲಿರುವುದನ್ನೂ ಲೆಕ್ಕಿಸದೆ. ಶೇಷುವಿನ ಪಕ್ಕ ಹಾಸಿಗೆಯ ಮೇಲೆ ಕುಳಿತು, ಅವನ ತಲೆಯನ್ನು ತನ್ನ ತೋಳಿಗೆ ಒತ್ತುಹಿಡಿದು, ಬೆನ್ನು ಸವರಲು ಆರಂಭಿಸಿದಳು. ಮಗುವಿಗೆ ನೆಗಡಿ-ಜ್ವರವೇನಾದರೂ ಬಂದಿದೆಯಾ ಎಂದು ಹಣೆಯ ಮೇಲೆ ಕೈಯಿಟ್ಟು ಪರೀಕ್ಷಿಸಿದಳು. ಅಳುವಿನಿಂದ ಮೈ ಕೊಂಚ ಬಿಸುಪಾಗಿದ್ದರೂ, ಜ್ವರದ ಉಷ್ಣತೆಯೇನು ಇರಲಿಲ್ಲ.

'ಏನಾಯಿತು ಪುಟ್ಟ? ಅಪ್ಪ ಏನಾದ್ರು ಬೈದ್ರೇನೋ?' ಕಳವಳದಿಂದ ವಿಚಾರಿಸಿದಳು ವತ್ಸಲಾ. 'ಸ್ಕೂಲಲ್ಲಿ ಟೀಚರ್ ಏನಾದ್ರು ಅಂದ್ರ? ಮಾತಾಡ್ಬೇಕು.'

'ಏನಿಲ್ಲ. ನಾನು ಬಾತ್ ರೂಮ್ಗೆ ಹೋಗ್ಬೇಕು ಬಿಡು,' ಗದ್ಗದಿಸುತ್ತಾ ಅಮ್ಮನನ್ನು ಮೆಲ್ಲಗೆ ದೂಡಲು ಯತ್ನಿಸಿದನು.

ಮಾತನಾಡದೆ, ಅಪ್ಪುಗೆಯನ್ನು ಬಿಡದೆ, ಹಾಗೆ ಇಬ್ಬರು ಕೆಲವು ನಿಮಿಷಗಳು ಕುಳಿತಿದ್ದರು.

'ಅಮ್ಮ, ನಾನು ನೋಡೋಕ್ಕೆ ತುಂಬಾ ಕಪ್ಪಗಿದ್ದೀನಾ?'

ಅನಿರೀಕ್ಷಿತವಾಗಿ ಮುಂದಿಟ್ಟ ಆ ಪ್ರಶ್ನೆಯಿಂದ ಪಲ್ಲಟಗೊಂಡ ವತ್ಸಲಾ ಅದಕ್ಕೆ ಉತ್ತರ ಕೊಡುವ ಮುನ್ನವೇ ಶೇಷು ಮುಂದುವರಿಸಿದನು.

'ಶುಬು ಮತ್ತೆ ನೀವೆಲ್ಲಾ ಬೆಳ್ಳಗಿದೀರಾ. ನಾನ್ಯಾಕೆ ಹೀಗಿದೀನಿ?'

ವತ್ಸಲಾ ಮತ್ತು ಅವಳ ಗಂಡನ ಮನೆಯಲ್ಲಿ ಎಲ್ಲಾ ಬೆಳ್ಳಗಿದ್ದರೂ, ಅವಳ ತವರುಮನೆಯಲ್ಲಿ ಅವಳ ತಾಯಿ ಮತ್ತು ತಂಗಿ ಕೃಷ್ಣವರ್ಣದವರಾಗಿದ್ದರು. ಹಾಗಾಗಿ ತಂಗಿಗೆ ಗಂಡು ಸಿಗುವುದು ಬಹಳ ಕಷ್ಟವಾಗಿದ್ದರ ಬಗ್ಗೆ ಮನೆಯಲ್ಲಿ ಆಗಾಗ್ಗೆ ಮಾತುಕತೆ ನಡೆದಿತ್ತು.

'ಅದಕ್ಕೆ ಅಲ್ವಾ ತಾತ "ನಮ್ಮನೇಲಿ ಶೇಷು ಚಿಗಲಿ, ಶುಬು ತಂಬಿಟ್ಟು" ಅನ್ನೋದು?'

ಚಿಗಲಿ ಅಥವಾ ಎಳ್ಳಿನುಂಡೆ - ವಿಶಿಷ್ಟವಾಗಿ ತೌಡು ತೆಗೆದಿರದ ಕರಿಎಳ್ಳಿನಿಂದ ತಯಾರಿಸಿದದ್ದು - ಬಹಳ ಕಪ್ಪಗೆ ಇರುತ್ತದೆ. ವೈದೃಶ್ಯವಾಗಿ, ಹೆಸರಿಟ್ಟು ಅಥವಾ ಕಡಲೆಹಿಟ್ಟಿನಿಂದ ಮಾಡುವ ತಂಬಿಟ್ಟು ತಿಳಿಕಂದು ಬಣ್ಣವಿರುತ್ತದೆ. ಆಡುಭಾಷೆಯಲ್ಲಿ ಚಿಗಲಿ ಮತ್ತು ತಂಬಿಟ್ಟನ್ನು ಕಪ್ಪು-ಬಿಳುಪಿಗೆ ರೂಪಕೋಕ್ತಿಯಾಗಿ ಬಳಸುವುದುಂಟು. "ಆ ಗಂಡ-ಹೆಂಡ್ತಿ ಈಡು-ಜೋಡು ಅಷ್ಟಕ್ಕಷ್ಟೇ. ಅವಳು ಚಿಗಲಿ, ಇವನು ತಂಬಿಟ್ಟು", "ಅವರಿಗೆ ಅವಳಿ-ಜವಳಿ ಮಕ್ಕಳು ಹುಟ್ಟಿವೆ. ಆದ್ರೆ, ಒಂದು ಚಿಗಲಿ, ಒಂದು ತಂಬಿಟ್ಟು" ಇತ್ಯಾದಿ.

ಅವರ ಮನೆಯಲ್ಲಿ ಮಕ್ಕಳ ತೊಗಲಿನ ವರ್ಣದ ಬಗ್ಗೆ ಹಿರಿಯರು ಬೇಕಾಪ್ಪು ಮಾತಾಡಿರುವುದುಂಟು. "ಸದ್ಯ! ಶೇಷು ಕಪ್ಪಾಗಿದ್ದು, ಶುಬು ಬೆಳ್ಳಗಿರುವುದಕ್ಕೆ, ನಾವು ಬಚಾವ್. ಹೆಣ್ಣು ಮಗು ಕಪ್ಪಾಗಿ ಹುಟ್ಟಿದ್ದರೆ ಫಜೀತಿ - ಗಂಡುಗಳು ಸಿಗೋದು ಕಷ್ಟ ಆಗ್ತಾಯಿತ್ತು ." ಕೆಲವೊಮ್ಮೆ ತಂದೆ-ತಾಯಿಗಳು ಮತ್ತು ಪೋಷಕರು, ತಮ್ಮ ಮಕ್ಕಳ ಬುದ್ಧಿವಂತಿಕೆ ಮತ್ತು ಪ್ರಜ್ಞೆಯನ್ನು ಕಡಿಮೆ ಅಂದಾಜು ಮಾಡಿ, ಅವರ ಹಾಜರಿಯಲ್ಲೇ, ಸೂಕ್ತವಲ್ಲದ ಸಂಭಾಷಣೆಯಲ್ಲಿ ತೊಡಗುತ್ತಾರೆ. ಇದರಿಂದ ಮಕ್ಕಳ ಅಂತಃಪ್ರಜ್ಞೆಗೆ, ಉದ್ದೇಶಪೂರ್ವಕವಲ್ಲದೆ ಘಾಸಿಯುಂಟಾಗುತ್ತದೆಯೇ ಎಂದು ಆಲೋಚಿಸಿರುವುದಿಲ್ಲ.

(ಮುಂದಿನ ಪುಟಕ್ಕೆ)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## *ಚಿಗಲಿ-ತಂಬಿಟ್ಟು*

(ಹಿಂದಿನ ಪುಟದಿಂದ)

'ನಮ್ಮ ಸ್ಕೂಲಲ್ಲೂ ಕೆಲವು ಬಸ್ಸಲ್ಲಿ ನನ್ನ "ನೀನು ಅಪ್ಪಿತಪ್ಪಿ ನಿಮ್ ಜಾತಿಲಿ ಹುಟ್ಟಿದೀಯ. ನಿಮ್ಮ ಜಾತಿಯವರ ಕಳೇನೇ ಇಲ್ಲ ನಿಂಗೆ." ಅಂತ ಅಣಕಿಸ್ತಾರೆ. ನಮ್ ಜಾತಿಯವರೆಲ್ಲಾ ಬೆಳ್ಳಗೇ ಇರಬೇಕಾ, ಅಮ್ಮಾ?' ಗಟ್ಟಿಯಾಗಿ ಉಸಿರೆಳೆದುಕೊಳ್ಳುತ್ತಾ, ತಲೆತಗ್ಗಿಸಿಕೊಂಡೇ, ಬೇಸರದಿಂದ ಶೇಷು ಕೇಳಿದನು.

ವತ್ಸಲಾಗೆ ಹೊಟ್ಟೆ ಕಿವುಚಿದಂತಾಯಿತು, ಹಠಾತ್ತನೆ ಹೊರಚಿಮ್ಮಿದ ದುಃಖದಿಂದ ಕಂಠ ಬಿಗಿಯಾಗಿ, ಉಸಿರುಕಟ್ಟುವಂತಾಗಿ, ಮಾತು ಹೊರಬಾರದಂತಾಯಿತು. 'ಒಂದು ನಿಮಿಷ ಇರು ಶೇಷು,' ತನ್ನ ಕೊಠಡಿಗೆ ಧಾವಿಸಿ, ಬಾಗಿಲು ಭದ್ರಮಾಡಿ, ಒಂದೆರಡು ನಿಮಿಷ ಗಟ್ಟಿಯಾಗಿ ಅತ್ತಳು. ಪ್ರಸಂಗ ಮಗುವಿನ ಮುಂದೆ ದೊಡ್ಡ ವಿಚಾರವಾಗುತ್ತದೇನೋ ಎಂಬ ಹೆದರಿಕೆಯಿಂದ, ಆದಷ್ಟು ಬೇಗ ದುಃಖ ದಮನಮಾಡಿಕೊಂಡು, ಶೇಷುವಿನ ಕೊಠಡಿಗೆ ಅಷ್ಟೇ ಬೇಗ ಧಾವಿಸಿ, ಮಗುವನ್ನು ಬಿಗಿದಪ್ಪಿ, ತಾಯಿಯ ಎದೆಯಾಳದ ಪ್ರೀತಿಯ ಮುತ್ತಿನ ಸುರಿಮಳೆ ಕಂದನ ಮೇಲೆರೆದಳು. ತಾಯಿ ಆಕಳನ್ನು ಕರುವು ಮಮತೆಯಿಂದ ಮೃದುವಾಗಿ ಹಾಯುವಂತೆ, ಶೇಷು ವತ್ಸಲಾಳ ಭುಜವನ್ನು ತನ್ನ ತಲೆಯಿಂದ ತಿವಿಯುತ್ತಿದ್ದನು.

'ಶೇಷು, ನಿಂಗೊಂದು ಸಣ್ಣ ಕಥೆ ಹೇಳ್ಲಾ?' ತನ್ನನ್ನು ಸ್ತಿಮಿತಕ್ಕೆ ತಂದುಕೊಂಡ ವತ್ಸಲಾ ವಿಚಾರಿಸಿದಳು. ಮುದ್ದಾಗಿ ತಲೆಯಲ್ಲಾಡಿಸಿದನು ಶೇಷು.

'ಒಬ್ಬರ ದೇವರಮನೆಯಲ್ಲಿ ಒಂದು ಬೆಳ್ಳಿ ತಟ್ಟೆ ಇತ್ತಂತೆ. ಆ ತಟ್ಟೆ ಮೇಲೆ ಪೂಜೆಗೆ ಇಟ್ಟಿರೋ ಒಂದು ತೆಂಗಿನ ಕಾಯಿ, ಒಂದೆರಡು ಮಾವಿನ ಹಣ್ಣು, ಕಿತ್ತಲೆ ಹಣ್ಣು, ಅನಾನಸ್, ಒಂದಿಷ್ಟು ಚಿಗಲಿ ಮತ್ತೆ ತಂಬಿಟ್ಟಿನ ಉಂಡೆಗಳು, ವೀಳ್ಯದೆಲೆ ಎಲ್ಲಾ ನೈವೇದ್ಯಕ್ಕೆ ಇಟ್ಟಿದ್ದರಂತೆ. ಒಂದು ಚಿಗಲಿ ಉಂಡೆ, ತಂಬಿಟ್ಟಿನ ಉಂಡೆಗೆ ಹೇಳಿತಂತೆ, "ನೀನು ನೋಡಲು ಎಷ್ಟು ಚೆನ್ನಾಗಿದ್ದೀಯಾ. ಆದರೆ ನನ್ನನ್ನು ನೋಡು? ಕಾಡಕಪ್ಪು. ನಾನೂ ನಿನ್ನ ಹಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು." ಇದನ್ನು ಕೇಳಿಸಿಕೊಂಡ, ಹತ್ತಿರದಲ್ಲೇ ಕುಳಿತಿದ್ದ ತೆಂಗಿನಕಾಯಿ ಹೇಳಿತಂತೆ, "ಅಯ್ಯೋ ಚಿಗಲಿ ಉಂಡೆಯೇ! ಬೇಜಾರು ಮಾಡ್ಕೋಬೇಡ. ನಿನಗೂ ತಂಬಿಟ್ಟಿಗೂ ನೀನು ಅಂದುಕೊಂಡಷ್ಟು ವ್ಯತ್ಯಾಸ ಇಲ್ಲ. ನೀನು ಉಂಡೆ. ಅವನೂ ಉಂಡೆ. ನಿನಗೆ ಆಕಾರ, ರುಚಿ ಕೊಡುವುದು ಬೆಲ್ಲದ ಪಾಕ. ಅವನಿಗೂ ಅಷ್ಟೆ. ಈ ತಟ್ಟೆಯಲ್ಲಿರುವ ಒಂದೊಂದು ವಸ್ತುಗಳು ನೋಡಲು ಬೇರೆ ಬೇರೆ ರೀತಿ. ಆದರೆ, ನೋಡಿದೆಯಾ? ತಟ್ಟೆಯಲ್ಲಿ ನಾವೆಲ್ಲ ಒಂದೇ - ದೇವರ ನೈವೇದ್ಯ, ನಂತರ ಮನುಷ್ಯನ ಭೋಜನ ವಸ್ತು. ಹೋಗುವುದು ಅವನ ಹೊಟ್ಟೆಗೆ, ಸೇರುವುದು ಅವನ ರಕ್ತವನ್ನು. ಈ ಸಣ್ಣ ಕಾಲಾವಧಿಯಲ್ಲಿ, ಖುಷಿಯಾಗಿದ್ದು, ಒಬ್ಬರನ್ನೊಬ್ಬರು ಹೋಲಿಸಿಕೊಳ್ಳದೆ, ನಿರಾಶೆ ಹೊಂದದೆ ಇರಬೇಕು. ನಾನು ಅನಾನಸ್ಸನ್ನು ನೋಡಿ, ಅವನು ಎಷ್ಟು ರೂಪವಂತ - ಮೈಮೇಲೆ ಎಷ್ಟು ಅಲಂಕಾರ, ಎಷ್ಟು ವಿಶಿಷ್ಟವಾದ ಜುಟ್ಟು - ನಾನು ಮೇಲಿಂದ ಕೆಳಕ್ಕೆ ಬರೀ ನಿರಾಶೆಗೊಳಿಸುವ ಕಂದುಬಣ್ಣ, ಮೈಯೆಲ್ಲಾ ನಾರು, ಎಂದು ಬೇಜಾರುಮಾಡಿಕೊಳ್ಳಬಹುದು. ಆದರೆ ಇಲ್ಲಿ ನಮ್ಮೆಲ್ಲರಿಗೂ ನಮ್ಮದೇ ಕರ್ತವ್ಯಗಳಿವೆ, ಉದ್ದೇಶಗಳಿವೆ. ನಾನು ದೇವರ ಕಳಶವೇರುತ್ತೇನೆ, ಇಲ್ಲವೇ ಅಡುಗೆಯ ಕೊಬ್ಬರಿಯಾಗುತ್ತೇನೆ. ಅನಾನಸ್ಸಿನ ಗೊಜ್ಜು ಎಷ್ಟು ಹೆಸರುವಾಸಿ ನಿನಗೆ ಗೊತ್ತಿಲ್ಲವೋ? ಚಿಗಲಿ ಉಂಡೆ ಎಷ್ಟು ರುಚಿ ಎಂದು ಪ್ರತಿವರ್ಷ ನಿನಗೆ ಆಕಾರಕೊಡುವ ಆ ಸೃಷ್ಟಿಕರ್ತನಿಗೇ ಗೊತ್ತು. ಹೋಗು, ಈಗ ಆನಂದದಿಂದ ನಿನ್ನ ಗೆಳೆಯ ತಂಬಿಟ್ಟಿನೊಂದಿಗೆ ಉರುಳಾಡು". ಕುಣಿದು ಉರುಳಾಡಲು ಶುರು ಮಾಡಿದರಂತೆ ಚಿಗಲಿ ಮತ್ತು ತಂಬಿಟ್ಟು. ದಿ ಎಂಡ್,' ಶೇಷುವಿನ ಹೊಟ್ಟೆಗೆ ಕಚಗುಳಿ ಇಟ್ಟಳು ವತ್ಸಲಾ.

'ಕಥೆ ನೀತಿ ಏನು ಗೊತ್ತಾಯಿತಾ?'

'ಆಮ್ ...ಆಮ್... ನಾವೆಲ್ಲಾ ಡಿಫರೆಂಟ್ ಆದ್ರೂ, ಸೇಮ್. ನಾನು ಬೇರೆಯವರ ಜೊತೆ ನನ್ನ ಕಂಪೇರ್ ಮಾಡ್ಕೊಬಾರದು. ಎಲ್ಲರ ಜೊತೆ ಹ್ಯಾಪಿಯಾಗಿ ಇರಬೇಕು. ಕರೆಕ್ಟಾ?' ತನ್ನ ಆಂಗ್ಲಭಾಷೆ ಮಿಶ್ರಿತವಾದ ಕನ್ನಡದಲ್ಲಿ, ಸಂತುಷ್ಟನಾದಂತಿದ್ದ, ಗಾಯವನ್ನು ಸದ್ಯಕ್ಕೆ ಮರೆತಂತಿದ್ದ ಶೇಷು ಹೇಳಿದ.

ಪ್ರೀತಿಯಿಂದ ಅವನ ತಲೆಯ ಕೂದಲನ್ನು ತನ್ನ ಎರಡೂ ಕೈಯಿಂದ ಕೆದರಿ, ಒಂದು ಉಮ್ಮು ಕೊಟ್ಟು, ಶೇಷುವನ್ನು ಸ್ನಾನದ ಕೋಣೆಯವರೆಗೆ ಅಟ್ಟಿಸಿಕೊಂಡು ಓಡಿಹೋದಳು ವತ್ಸಲಾ.

## ಬಾಂಧವ್ಯದ ಹಬ್ಬ ಪಂಚಮಿ



ಮಮತಾ ನಾಗೇಂದ್ರ

ನಮ್ಮ ಭಾರತ ದೇಶದ ಸಂಸ್ಕೃತಿಯೇ ಹಾಗೆ, ಪ್ರತಿಯೊಂದು ಕೆಲಸಕ್ಕೂ ಒಂದು ಅರ್ಥ,ಮಾಡುವ ವಿಧಾನ ಹಾಗು ಅದರ ಫಲಿತಾಂಶವನ್ನು ವಿವರಿಸುತ್ತದೆ. ಎಲ್ಲಾ ಒಂದು ರೀತಿಯ "complete package Information" ಇದ್ದ ಹಾಗೇ. ಇದರಿಂದಲೇ ನಮ್ಮ ಸಂಸ್ಕೃತಿಯನ್ನು ವಿಶ್ವ ಮಾದರಿ ಸಂಸ್ಕೃತಿ ಎನ್ನುವುದು. ನಮ್ಮ ಜೀವನ ಶೈಲಿಯಿಂದ ಹಿಡಿದು ನಂಬಿಕೆಗಳವರಗೆ, ಆಹಾರ ಪದ್ಧತಿಯಿಂದ ಹಿಡಿದು ಉಡುಗೆ ತೊಡುಗೆಗಳವರಗೆ, ಹಬ್ಬ ಹರಿದಿನಗಳಿಂದ ಹಿಡಿದು ಆಟ ಪಾಠಗಳವರಗೆ ಎಲ್ಲದರಲ್ಲೂ ವಿಭಿನ್ನತೆ ಹಾಗೂ ಪರಿಪೂರ್ಣತೆಯನ್ನು ಕಾಣಬಹುದು. ಹಬ್ಬಗಳ ಹೆಸರಿನ ಪಟ್ಟಿಯಂತೂ ಸ್ವಲ್ಪ ಉದ್ದವೇ. ಎಲ್ಲ ಕಾಲದಲ್ಲೂ ಎಲ್ಲಾ ಋತುವಿನಲ್ಲೂ ಹಬ್ಬಗಳನ್ನು ಆಚರಿಸುತ್ತೇವೆ. ಆ ಹಬ್ಬಕ್ಕೆ ಅದರದೇ ಆದ ಮಹತ್ವ ಇದೆ. ಈ ಹಬ್ಬಗಳ ಸಾಲಿನಲ್ಲಿ ಬಾಂಧವ್ಯದ ಪ್ರಾಮುಖ್ಯತೆಯನ್ನು ಸಾರುವ ಹಬ್ಬವೇ "ನಾಗರ ಪಂಚಮಿ". ಇದಕ್ಕೆ ಅಗ್ರಸ್ಥಾನ ಎಂದರೆ ತಪ್ಪಾಗಲಾರದು. ನಾಗ ದೇವರನ್ನು ಪೂಜಿಸುವ ಹಬ್ಬ ಒಂದೆಡೆಯಾದರೆ "ಒಡ ಹುಟ್ಟಿದ ಪಂಚಮಿ" ಇನ್ನೊಂದೆಡೆ. "ಸೋದರತ್ವದ ಹಬ್ಬ". ಇತ್ತೀಚಿನ ದಿನಗಳಲ್ಲಿ Mother's day, Father's day, Grandparent's day ಎಷ್ಟೊಂದು ಡೇ ಗಳನ್ನು ಆಚರಿಸುತ್ತೇವೆ. ಆದರೆ ನಮ್ಮ ಹಿರಿಯರು ಮಾತ್ರ ಬಾಂಧವ್ಯಗಳಲ್ಲಿ ಸೋದರತ್ವದ ಹಬ್ಬವನ್ನೇ ಆಚರಿಸಲು ಕಾರಣವೇನು?. ಎಲ್ಲಿ ಸಂಬಂಧಗಳು ಸುಲಭವಾಗಿ ಸಡಿಲವಾಗುವುದೋ ಅದನ್ನು ಭದ್ರಪಡಿಸಬೇಕೆಂದು ಇರಬಹುದಾ?. 'ಹುಟ್ಟುತ್ತಾ ಅಣ್ಣ ತಮ್ಮಂದಿರು ಬೆಳೆದ ಮೇಲೆ ದಾಯಾದಿಗಳು' ಎಂಬ ಗಾದೆ ಮಾತುಗಳನ್ನು ಸುಳ್ಳಾಗಿಸಲು ಇರಬಹುದಾ?. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂಬ ಮನೆ ಮಗಳ ಅಭದ್ರತೆಯನ್ನು ಹೋಗಲಾಡಿಸಲು ಇರಬಹುದಾ?. ಏನೇ ಕಾರಣ ಕೊಟ್ಟರು ಅದರ ಉದ್ದೇಶ ಒಂದೇ ಅದುವೇ "ಭಾಂಧವ್ಯದ ವೃದ್ಧಿ".

ನಾನಾ ಕಡೆ ನಾನಾ ಹೆಸರಿನಲ್ಲಿ ಈ ಬ್ರದರ್ ಸಿಸ್ಟರ್ಸ್ ಡೇ ನ ಆಚರಿಸುತ್ತಾರೆ. "ರಕ್ಷಾ ಬಂಧನ" ಹಬ್ಬ ಕೂಡ ಭ್ರಾತೃತ್ವವನ್ನೇ ಸಾರುತ್ತದೆ. ಕೆಲವರು ಹಾಲು ತುಪ್ಪವನ್ನು ಅವರ ಅಣ್ಣ ತಮ್ಮಂದಿರ ಬೆನ್ನಿಗೆ ಸವರಿದರೆ, ಮತ್ತೆ ಕೆಲವರು ರಾಖಿ (ರಕ್ಷೆ)ಯನ್ನು ಕಟ್ಟುತ್ತಾರೆ. ಮೆಹಂದಿ ಹಾಕುವುದು, ಉಯ್ಯಾಲೆ ಆಡುವುದು, ಬಂಡಾರ ಹೊಡೆಯುವುದು, ಕೊಡುಗೆ ನೀಡುವುದು ಹೀಗೆ ಹತ್ತು ಹಲವು ಬಗೆಗಳಲ್ಲಿ ಆಚರಿಸುತ್ತಾರೆ. ಈ ಹಬ್ಬ ರಕ್ತ ಸಂಬಂಧಿಗಳು ಮಾತ್ರವಲ್ಲ, ಜಾತಿ ಧರ್ಮಗಳ ಸಂಕೋಲೆಗಳಿಲ್ಲದೆ ಯಾರು ಅಣ್ಣ ತಮ್ಮಂದಿರ ಸಮಾನರಾಗಿರುತ್ತಾರೋ, ರಕ್ಷಣೆಯನ್ನು ನೀಡುತ್ತಾರೋ ಅವರೆಲ್ಲರೂ ಆಚರಿಸಬಹುದಾಗಿದೆ. ಜಾನಪದದಲ್ಲಿ ಈ ಹಬ್ಬದ ಜಾತ್ರೆಯೇ ನಡೆದಿದೆ. ಅಣ್ಣ ತಂಗಿಯರ ಹಾಡುಗಳಿಗೆ ಬರವಿಲ್ಲ, ಅದರಲ್ಲೂ ಈ ಹಬ್ಬಕ್ಕೆ ವಿಶೇಷ ಮಾನ್ಯತೆ. ಉದಾಹರಣೆಗೆ 'ಪಂಚಮಿ ಹಬ್ಬ ಉಳಿದಾವು ದಿನ ನಾಕಾ, ಇನ್ನು ಅಣ್ಣ ಬರಲಿಲ್ಲ ಯಾಕೊ ಕರಿಯಾಕ' ಎಂಬ ಹಾಡು ಹೆಣ್ಣು ಮಗಳು ಈ ಹಬ್ಬಕ್ಕಾಗಿ, ಅಣ್ಣನಿಗಾಗಿ ಕಾಯುವುದನ್ನು ವರ್ಣಿಸುತ್ತದೆ. ಈ ಹಬ್ಬದ ಸೊಬಗನ್ನು, ಪ್ರಾಮುಖ್ಯತೆಯನ್ನು ಸಾರುವ ಅನೇಕ ಗೀತೆಗಳಿವೆ.

ಇತ್ತೀಚಿನ ಆಧುನಿಕ ವೇಗದ ಜೀವನ ಶೈಲಿಯಲ್ಲೂ ಮರೆತಂತೆ ಮರೆಯದೆ ಇರುವ ಹಬ್ಬ ಎಂದರೆ ತಪ್ಪಾಗಲಾರದು. ಅಂದರೆ ಮಾರ್ಕೆಟ್ನಲ್ಲಿ ರಾಖಿ ನೋಡಿದಾಗ, ಉಯ್ಯಾಲೆ ಆಡಿದಾಗ, ಜಾನಪದ ಹಾಡು ಕೇಳಿದಾಗ, ಅಣ್ಣ ತಂಗಿಯರ ಸಿನಿಮಾ ನೋಡಿದಾಗ 'ಥಟ್' ಎಂದು ನೆನಪಾಗುವುದು ಈ ಹಬ್ಬ. ಎಷ್ಟೋ ಅರ್ಥವಿಲ್ಲದ 'ಡೇ' ಗಳನ್ನು ಆಚರಿಸುವ ಬದಲು ಸರ್ವ ಕಾಲಕ್ಕೂ, ಸರ್ವ ಧರ್ಮಕ್ಕೂ ಅವಶ್ಯಕವಾಗಿರುವ ಪ್ರೀತಿ ಭಾಂಧವ್ಯ ಹೆಚ್ಚಿಸುವ ಇಂತಹ ಹಬ್ಬವನ್ನು ಆಚರಿಸೋಣ. ಒಂಟಿಯಾಗಿ ಹುಟ್ಟಿ ಅಥವಾ ಜೊತೆಯಲ್ಲೇ ಹುಟ್ಟಿದರೂ ಒಂಟಿಯಾಗಿ ಬೆಳದು ಬದುಕುವ ಮಗುವಿಗೆ ಪ್ರೀತಿಯ ಭದ್ರತೆಯನ್ನು ನೀಡೋಣ. ಮುಂದಿನ ಪೀಳಿಗೆಗೆ ಈ ಹಬ್ಬದ ಮಹತ್ವವನ್ನು ತಿಳಿಸೋಣ ಮತ್ತು "ವಸುಧೈವ ಕುಟುಂಬಕಂ" ಎನ್ನೋಣ.


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



# ನನಗಿಲ್ಲ ನಾನೊಬ್ಬನೇ ಬದುಕುವ ದಾಹ



ಸರಿತಾ ನವಲಿ

“**ಅ**ವ್ವ, ನಾನು ದುಡೀಲಿಕ್ಕೆ ಪಟ್ಟಣಕ್ಕೆ ಹೋಗ್ತೀನಿ.ಇಲ್ಲಿ ಹಳ್ಳ್ಯಾಗ ಇದ್ದು ಬೇಸಾಯ ಮಾಡಿಕೊಂತ ಇದ್ರ, ಹೊಟ್ಟೇನೂ ತುಂಬಂಗಿಲ್ಲ, ಸಾಲಾನೂ ತೀರಂಗಿಲ್ಲ” ಎಂದು ಶಿವು ಹೇಳಿದ. ಅವನ ಮಾತುಗಳನ್ನು ಕೇಳಿ ಮನಸ್ಸಿಗೆ ನೋವಾದರೂ ತೋರ್ಪಡಿಸದೆ ಅವನಿಗೆ ಧೈರ್ಯ ತುಂಬುವ ಧ್ವನಿಯಲ್ಲಿ “ಅಷ್ಟು ಅವಸರ ಮಾಡಬ್ಯಾಡೋ ಮಗ.ಇನ್ನೊಂದು ಮಳಿಗಾಲ ಆದ್ರೂ ನೋಡೋಣು. ಆಗೂ ಹೀಂಗೆ ಮಳಿ ಬರದೇ ಬೆಳಿ ಬರಲಿಲ್ಲಂದ್ರ ಪಟ್ಟಣಕ್ಕ ಹೋಗಿ ದುಡಿಯೋ ಯೋಚ್ನೆ ಮಾಡಿದ್ರಾತು” ಎಂದು ಸಮಾಧಾನದ ಮಾತುಗಳನ್ನಾಡಿದಳು ರೇಣುಕಾ. “ಅದೆಷ್ಟು ವರ್ಸದಿಂದ ಹೀಂಗ ಹೇಳಿಕೋತ ಬಂದಿಯವ್ವ, ಇದ್ರಾಗ ಅವಸರ ಮಾಡೋದು ಏನೈತಿ?” ಎಂದ ಶಿವು ಕೈಯಲ್ಲಿದ್ದ ವಸ್ತ್ರವನ್ನು ತಲೆಗೆ ಸುತ್ತಿಕೊಳ್ಳುತ್ತ ಎದ್ದು ಹೋದ. ಅವನ ಮಾತಿನಲ್ಲಿನ ನೋವನ್ನು ಕಂಡು ರೇಣುಕಾ ನೊಂದುಕೊಂಡಳು.

***

ಕೊಪ್ಪಳ ಜಿಲ್ಲೆಯ ಪುಟ್ಟ ಹಳ್ಳಿ ಸೋಮನಾಳದಲ್ಲಿ ವಾಸಿಸುತ್ತಿದ್ದ ರೇಣುಕಾಳ ಕುಟುಂಬ ಬದುಕಿಗಾಗಿ ಬೇಸಾಯವನ್ನು ನಂಬಿಕೊಂಡಿತ್ತು. ಕಳೆದ ಕೆಲವು ವರ್ಷಗಳಿಂದ ಮಳೆ ಬೀಳುವ ಪ್ರಮಾಣ ಬಹಳ ಕಡಿಮೆಯಾಗಿ, ಹೊಲವನ್ನು ಉತ್ತು ಬಿತ್ತಿದ ಬೀಜವೆಲ್ಲ ಸಸಿಯಾಗಿದ್ದಾಗಲೆ ಒಣಗಿ ಹೋಗಿ,ಯಾವುದೇ ಹೆಚ್ಚಿನ ಆದಾಯವಿಲ್ಲದೇ ಬದುಕು ಅವರನ್ನು ಸಾಲಗಾರರನ್ನಾಗಿಸಿತ್ತು. ಆ ಹಳ್ಳಿಯ ಬಹುತೇಕ ಕುಟುಂಬಗಳ ಪರಿಸ್ಥಿತಿಯೂ ಹೀಗೇ ಇದ್ದುದರಿಂದ ಅನೇಕರು ಹಳ್ಳಿಯನ್ನು ತೊರೆದು ಹತ್ತಿರದ, ದೂರದ ಪಟ್ಟಣಗಳಿಗೆ ಕೆಲಸ ಅರಸಿಕೊಂಡು ಹೋಗಿದ್ದರು. ರೇಣುಕಾಳ ಮಗ ಶಿವು ಸಹ ಪಟ್ಟಣಕ್ಕೆ ಹೋಗಿ ದುಡಿಯುವ ಮಾತನಾಡಿದಾಗಲೆಲ್ಲ ರೇಣುಕಾ



ಅವನನ್ನು ಸಮಾಧಾನಿಸುವ ಪ್ರಯತ್ನ ಮಾಡುತ್ತಿದ್ದಳು. ರೈತ ಕುಟುಂಬದಲ್ಲಿಯೇ ಹುಟ್ಟಿ ಬೆಳೆದ ರೇಣುಕಾ ಸೋಮನಾಳಿನ ಹತ್ತಿರದ ಕನಕಗಿರಿಯಲ್ಲಿ ಹೈಸ್ಕೂಲ್ ವರೆಗೆ ಶಾಲೆಗೆ ಹೋಗಿದ್ದಳಾದರೂ ಅಲ್ಲಿ ಕಲಿತ ಪುಸ್ತಕದ ವಿದ್ಯೆ ಬಹಳ ಕಡಿಮೆ. ಮನೆಗೆಲಸದಲ್ಲಿ ತಾಯಿಗೆ ನೆರವಾಗುತ್ತ ಶಾಲೆಗೆ ಹೋಗುತ್ತಿದ್ದ ಅವಳಿಗೆ ಹೊಲಿಗೆ,ಕಸೂತಿ,ಹೆಣಿಕೆಗಳು ನೆಚ್ಚಿನ ವಿಷಯಗಳಾಗಿದ್ದವು. ಸುಂದರವಾಗಿ ರಂಗೋಲಿ, ಚಿತ್ರಗಳನ್ನು ಬಿಡಿಸಿ ಬಣ್ಣ ತುಂಬುತ್ತಿದ್ದ ರೇಣುಕಾ ತನ್ನ ಗೆಳತಿಯರಿಗೆಲ್ಲ ಅವುಗಳನ್ನು ಕಲಿಸಿಕೊಡುತ್ತಿದ್ದಳು. ಹೈಸ್ಕೂಲು ಮುಗಿಸಿದ ವರ್ಷದಲ್ಲೇ ಮದುವೆ ಮಾಡಿಕೊಂಡು ಗಂಡನ ಮನೆಯಾದ ಸೋಮನಾಳಿಗೆ ಬಂದು ನೆಲೆಸಿದ್ದಳು. ಇಲ್ಲಿ ಅವಳ ದಿನಚರಿ ಅಂಗಳ ಗುಡಿಸುವುದರಿಂದ ಪ್ರಾರಂಭವಾಗಿ ಸಂಜೆ ಕೊಟ್ಟಿಗೆಗೆ ಹುಲ್ಲು ಹಾಕುವವರೆಗೆ ನಡೆಯುತ್ತಿತ್ತು. ಅವರಿಗಿದ್ದ ಆರು ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡಿ ಜೀವನ ನಡೆಸುತ್ತಿದ್ದ ಪತಿ, ಮೂರು ಮಕ್ಕಳು, ಎರಡು ಜೊತೆ ಎತ್ತುಗಳು, ಹಸು-ಕರುಗಳು ರೇಣುಕಾಳನ್ನು ಒಬ್ಬ ಸಂತೃಪ್ತ ’ಗ್ರಾಮೀಣ ಮಹಿಳೆ’ಯನ್ನಾಗಿಸಿದ್ದವು. ಆದರೆ ಇತ್ತೀಚಿನ ವರ್ಷಗಳಲ್ಲಿ ಮಳೆಯಿಲ್ಲದೆ, ಬೋರ್ ವೆಲ್ ಗಳು ಒಣಗಿ ಹೋಗಿ ನೀರಿಲ್ಲದೇ ಬಿತ್ತಿದ ಬೆಳೆಯೆಲ್ಲ ಬಾಡಿಹೋಗಿ, ಅದೆಷ್ಟೋ ಹಳ್ಳಿಗಳಲ್ಲಿನಂತೆ ಈ ಸೋಮನಾಳಿನ ರೈತರ ಕನಸುಗಳೂ ಕಮರಿಹೋಗಿ ಅವರನ್ನು ಸಾಲಗಾರರನ್ನಾಗಿಸಿದ್ದವು. ರೇಣುಕಾಳ ಕುಟುಂಬದ ಪರಿಸ್ಥಿತಿಯೂ ಇದೇ ಆಗಿತ್ತು.

***

“ಯಾಕೋ ವಿಕ್ಕಿ, ತಿಂಡೀನ ಅರ್ಧನೇ ತಿಂದಿದ್ದೀಯ?ದಿನಾ ಸ್ಕೂಲಿಗಂತ ಮಾಡಿ ಕಳಿಸೋ ತಿಂಡೀನ ತಿನ್ನದೇ ಹಾಗೇ ಬಿಟ್ಟಿರ್ತೀಯಲ್ಲ?” ಶಾಲೆಯಿಂದ ಮನೆಗೆ ಬಂದ ಮಗನ ಊಟದ ಡಬ್ಬಿಯನ್ನು ನೋಡಿ ಪ್ರಶ್ನಿಸಿದಳು ಸ್ವಾತಿ. “ಓ ಅದಾ,ಆ ತಿಂಡಿ ನನಗೆ ಇಷ್ಟ ಆಗಲಿಲ್ಲ ಮಮ್ಮಿ”ಎಂದು ಉತ್ತರಿಸಿದ ವಿಕ್ಕಿ.“ಹೊಟ್ಟೆ ಹಸಿದುಕೊಂಡು ಯಾಕೋ ಇರ್ತೀಯಾ” ಎಂದ ಅಮ್ಮನ ಕಾಳಜಿಗೆ “ಐಸ್ ಕ್ರೀಮ್ ಇಲ್ಲಾ ಚಾಕೊಲೇಟ್ ತಿಂತೀನಿ ಮಮ್ಮಿ”ನಗುತ್ತ ಹೇಳಿದ ವಿಕ್ಕಿ.“ಊಟ, ತಿಂಡಿಯೆಲ್ಲ ತಿನ್ನದೇ ಹಾಳು ಮಾಡಿ ಎಸೀಬಾರದು ಪುಟ್ಟಾ” ಎಂದು ಸ್ವಾತಿ ಹೇಳಿದಾಗ, ಅವಳ ಮಾತನ್ನು ಕೇಳಿಸಿಕೊಳ್ಳದಂತೆ ತನ್ನ ಕೋಣೆ ಸೇರಿಕೊಂಡ ವಿಕ್ಕಿ ವಿಡಿಯೋ ಗೇಮ್ ಆಡುತ್ತ ದೊಡ್ಡದಾದ ಚಾಕೊಲೇಟ್ ಬಾರನ್ನು ಮೆಲ್ಲುತ್ತಿದ್ದ!

ರಾತ್ರಿಯೂಟದ ವೇಳೆಯಲ್ಲಿಯೂ ಊಟದ ಬಗ್ಗೆ ಮಕ್ಕಳ ನಿರಾಸಕ್ತಿ, ಅರ್ಧದಷ್ಟು ಊಟವನ್ನು ತಟ್ಟೆಯಲ್ಲಿ ಚೆಲ್ಲುವುದು ನೋಡಿ ಮಕ್ಕಳ ಮೇಲೆ ರೇಗಿದಳು ಸ್ವಾತಿ.“ಯಾಕ ಮಮ್ಮಿ,ಯಾವಾಗಲೂ Food Waste ಮಾಡ್ತೀವಿ ಅಂತ ಬೈಯ್ತಾ ಇರ್ತೀಯಾ?When we can afford it,what’s wrong if we waste some food?”ಮಗಳು ವಿಮ್ಮಿ ಪ್ರಶ್ನಿಸಿದಳು. “ಅಫೋರ್ಡ್ ಅಂತೆ ಅಫೋರ್ಡ,ರೈತರು ಬೆಳೆ ಬೆಳೀಲಿಕ್ಕೆ ಎಷ್ಟು ಕಷ್ಟ ಪಡ್ತಾರೆ ಗೊತ್ತಾ?”ನೊಂದು ನುಡಿದಳು ಸ್ವಾತಿ. “ಅದಕ್ಕೂ ,ಈ ಚಿತ್ರಾನ್ನ ಚೆಲ್ಲಿದ್ದಕ್ಕೂ ಏನು ಕಾರಣ ಮಮ್ಮಿ?”ವಿಕ್ಕಿ ಪ್ರಶ್ನೆ ಎಸೆದಿದ್ದ.“**Hey Kids, Easy, Easy.** ನಿಮ್ಮ ಮಮ್ಮಿ ಈ ಚಿತ್ರಾನ್ನನ ನಿಮ್ಮ ತಾತ ಕಳಿಸಿದ ಅಕ್ಕಿಯಿಂದ ಮಾಡಿದ್ದು. ಆ ಅಕ್ಕೀನ ಅವರ ಗದ್ದೆಯಲ್ಲಿ ಬೆಳೆದ ಭತ್ತದಿಂದ ಮಾಡಿದ್ದು.ಈಗ ನೀವು ಅದನ್ನು ತಿನ್ನಲಾರದೆ ಚೆಲ್ಲಿದ್ದು ನೋಡಿ ಮಮ್ಮಿಗೆ ಕೋಪ ಬಂದಿದೆ”ಎಂದು ಮಕ್ಕಳನ್ನು ಸಮಾಧಾನ ಪಡಿಸಿದ ರಘು.“ಹೌದು, ನಮ್ಮೂರಲ್ಲಿ ರೈತರು ಎಷ್ಟು ಕಷ್ಟ ಪಡ್ತಾರಂತ ಈ ಸಿಟಿಯಲ್ಲಿರೋ ನಿಮಗೇನು ಗೊತ್ತು?”ಎಂದು ಕೋಪದಿಂದ ಹೇಳಿದ ಸ್ವಾತಿ ಕೋಣೆಯೊಳಗೆ ಹೋದಳು. ಕಂಪ್ಯೂಟರಿನ ಮುಂದೆ ಕುಳಿತ ಸ್ವಾತಿಯ ಯೋಚನೆಗಳಲ್ಲಿ ಅವಳ ಊರಾದ ಕನಕಗಿರಿ,ಅಲ್ಲಿನ ಕನಕಾಚಲಪತಿ ದೇವಸ್ಥಾನ,ವರ್ಷಕ್ಕೊಮ್ಮೆ ನಡೆಯುವ ಜಾತ್ರೆ, ಹೊಲ-ಗದ್ದೆಗಳು,ಅಲ್ಲಿ ದುಡಿಯುವ ಶ್ರಮಜೀವಿಗಳು,ಅವರ ಸರಳವಾದ ಜೀವನ ಎಲ್ಲ ಸುಳಿದು ಹೋದವು.ಆಗೊಮ್ಮೆ,ಈಗೊಮ್ಮೆ ಸ್ವಾತಿ ಕನಕಗಿರಿಗೆ ಹೋಗಿ ಬರುತ್ತಿದ್ದಳಾದರೂ,ಆಫೀಸಿನ ಕೆಲಸ, ಮಕ್ಕಳ ಶಾಲೆ ಎಂಬೆಲ್ಲ ಕಾರಣಗಳಿಂದ ಹಲವಾರು ವರ್ಷಗಳಿಂದ ಊರ ಜಾತ್ರೆಗೆ ಹೋಗಲು ಆಗಿರಲಿಲ್ಲ. ಹಿಂದಿನ ದಿನವೇ ಅವಳ ಅಪ್ಪ,ಅಮ್ಮ ಫೋನ್ ಮಾಡಿ ಮಾತನಾಡಿದಾಗ ಮುಂದಿನ ತಿಂಗಳಲ್ಲಿ ನಡೆಯಲಿರುವ ಕನಕಾಚಲಪತಿ ಜಾತ್ರೆಗೆ ಹೋಗುತ್ತಿರುವುದಾಗಿ ಹೇಳಿದ್ದರು. ಆ ದಿನವೆಲ್ಲ ಊರಿನ ನೆನಪು ಕಾಡಿತ್ತು. ಈ ಸಲ ತಾನೂ ಜಾತ್ರೆಗೆ ಹೋಗಿಬರಬೇಕೆಂದು ನಿರ್ಧರಿಸಿದ ಸ್ವಾತಿ ಮರುದಿನವೇ ಆಫೀಸಿನಲ್ಲಿ ರಜೆಗಾಗಿ ಅರ್ಜಿ ಹಾಕಬೇಕೆಂದುಕೊಂಡಳು

***

“ಹೇ, ನೀನು ರೇಣು ಅಲ್ಲೇನು?ನನ್ ಗುರುತು ಸಿಕ್ತಾ? ನಾನು ಸ್ವಾತಿ.ನಾವು ಒಟ್ಟಿಗೆ ಹೈಸ್ಕೂಲ್ ಓದ್ತಾ ಇದ್ವಿ.ನೀನು ನೋಡ್ಲಿಕ್ಕೆ ಒಂದಿಷ್ಟೂ ಬದಲಾಗಿಲ್ಲ. ಎಲ್ಲಿದ್ದಿ? ಹೆಂಗಿದ್ದಿ?”ಪಟಪಟನೆ ಮಾತನಾಡಿದಳು ಸ್ವಾತಿ. ಅವಳ ಮಾತುಗಳನ್ನೆಲ್ಲ ಕೇಳಿಸಿಕೊಂಡು ಉತ್ತರಿಸಲು ಗಲಿಬಿಲಿಗೊಂಡಳು ರೇಣುಕಾ. ಒಂದೆರಡು ಗಳಿಗೆ ಸ್ವಾತಿಯನ್ನು ನೋಡಿದ ರೇಣುಕಾಗೆ ಅವಳನ್ನು ಗುರುತಿಸಲಾಗಲಿಲ್ಲ. ರೇಣುಕಾಳ ಪ್ರಶ್ನಾರ್ಥಕ ನೋಟವನ್ನು ಕಂಡ ಸ್ವಾತಿ ಮಾತು ಮುಂದುವರೆಸಿದಳು.“ನಾನು,ನೀನು,ದೀಪಾ,ಜಯಶ್ರೀ ಎಲ್ಲಾರೂ ಒಂದೇ ಕ್ಲಾಸಿನ್ಯಾಗ ಓದ್ತಾ ಇದ್ವಿ.ನೀನು ಭಾಳ ಛಂದಾಗಿ ಡ್ರಾಯಿಂಗ್ ಮಾಡ್ತಿದ್ದಿ.ನಮ್ಮ ಮನಿ ಇಲ್ಲೆ ಹನುಮಪ್ಪನ ಗುಡಿ ಹತ್ರ ಇತ್ತು.ನಮ್ಮ ತಂದಿ ವಕೀಲರಾಗಿದ್ದರು.ಈಗ ನಾವೆಲ್ಲರೂ ಬೆಂಗಳೂರನ್ಯಾಗ ಇರ್ತೀವಿ.ಜಾತ್ರಿಗಂತ ಬಂದೀವಿ. ನೆನಪಾಯ್ತಾ?”ಎಂದಳು.“ಹೂಂ ಈಗ ನೆನಪಾತು.ಎಷ್ಟು ವರ್ಷ ಆತಲ್ಲ! ನಿನ್ನ ನೋಡಿ ಭಾಳ ಖುಷಿ ಆತು”ಕಣ್ಣರಳಿಸಿ ಮಾತು ಮುಂದುವರೆಸಿದಳು ರೇಣುಕಾ.“ನಾವು ಹೈಸ್ಕೂಲ್ ಮುಗ್ಸಿದ ವರ್ಷನೇ ನಂದು ಮದುವಿ ಆತು. ಮದುವಿ ಕರೀಲಿಕ್ಕೆ ನಿಮ್ಮನಿಗೆ ಬಂದಿದ್ದೆ.ನೀನು ಆಗ ಓದ್ಲಿಕ್ಕಂತ ಧಾರವಾಡದ ಹಾಸ್ಟೆಲ್ಲಿನ್ಯಾಗ ಇದ್ದಿ, ಅಲ್ಲೇನು?”ಎಂದು ರೇಣುಕಾ ಸ್ವಾತಿಗೆ ಹೇಳಿದಾಗ, “ಹೌದು. ನಾನು ಪಿ.ಯು.ಸಿ ಮುಗಿಸಿ ಇಂಜಿನಿಯರಿಂಗ್ ಮಾಡಿ ಬೆಂಗಳೂರಿನ್ಯಾಗ ಕೆಲಸಕ್ಕ ಸೇರಿಕೊಂಡೆ.ಅಲ್ಲೇ ಮದುವಿ ಆತು.ನಮ್ಮ ಮನಿಯವರೂ ಇಂಜಿನಿಯರ್ ಇದ್ದಾರ.ಇಬ್ಬರು ಮಕ್ಕಳಿದ್ದಾರ.ನಮ್ಮ ಅಪ್ಪ,ಅವ್ವ,ಅಣ್ಣ ಎಲ್ಲರೂ ಈಗ ಅಲ್ಲೇ ಇರ್ತಾರ. ಆಗಾಗ ಇಲ್ಲಿಗೆ ಬರ್ತಿದ್ದೆ. ಅದೆಷ್ಟೋ ವರ್ಷ ಆದಮ್ಯಾಲೆ ಇದ ಸಲ ನೋಡು ಕನಕಾಚಲಪತಿ ಜಾತ್ರಿಗೆ ಅಂತ ಬಂದಿದ್ದು.ನಿನ್ನ ನೋಡಿ ಭಾಳ ಖುಷಿ ಆತು”ಎಂದಳು ಸ್ವಾತಿ. “ನಾವು ಆರಾಮ ಇದ್ದೀವಿ. ನನ್ನ ಇಲ್ಲೇ ಹತ್ರದ ಸೋಮನಾಳಿಗೆ ಮದುವಿ ಮಾಡಿಕೊಟ್ಟಾರ. ಕಮತ(ಬೇಸಾಯ)ದ ಮನಿ.ಈಗ ರೈತರ ಜೀವನ ಅಂದ್ರ ಎಲ್ಲಾರಿಗೂ ಗೊತ್ತೇ ಇರತೈತಿ.ಹೆಚ್ಚಿಗಿ ಹೇಳಾಕ ಇರಂಗಿಲ್ಲ”ಎಂದಳು ರೇಣುಕಾ. ಅವಳ ಮಾತಿನಲ್ಲಿನ ನೋವನ್ನು ಗ್ರಹಿಸಿದಳು ಸ್ವಾತಿ.ಆದರೆ ಅದೆಷ್ಟೋ ವರ್ಷಗಳ ನಂತರ ಭೇಟಿಯಾದ ಗೆಳತಿಯರಲ್ಲಿ ಸಂತೋಷವೊಂದು ಕಂಡಿತ್ತು.ಇಬ್ಬರೂ ರಥಬೀದಿಯಲ್ಲಿನ ಅಂಗಡಿಗಳಿಗೆ ಹೋಗಿ ಜಾತ್ರೆಯಲ್ಲಿನ ರೂಢಿಯಂತೆ ಗಾಜಿನ ಬಳೆಗಳನ್ನು, ಕುಂಕುಮವನ್ನು ಖರೀದಿಸಿ, ಮಂಡಕ್ಕಿಪುರಿ, ಬತ್ತಾಸುಗಳನ್ನು ತಿಂದರು. ಮಗಳಿಗೆಂದು ರಂಗೋಲಿ ಪುಸ್ತಕವನ್ನು ಕೊಳ್ಳಲು ಯೋಚಿಸಿದ ಸ್ವಾತಿಗೆ ತಮ್ಮ ಶಾಲಾ ದಿನಗಳಲ್ಲಿನ ಜಾತ್ರೆಯ ಸಂಭ್ರಮವೆಲ್ಲ ನೆನಪಾಗಿ ಈಗ ಜಾತ್ರೆ ಬೀದಿಯಲ್ಲಿನ ಅಂಗಡಿಗಳ ಸಂಖ್ಯೆ ಕಡಿಮೆಯಾಗಿದೆ ಎನಿಸಿತು. ಈ ಬಗ್ಗೆ ಕೇಳಿದಾಗ ರೇಣುಕಾ“ಈಗೀಗ ಯಾರೂ ಅಷ್ಟು ಅಂಗಡಿ ಹಚ್ಚಂಗಿಲ್ಲ ಸ್ವಾತಿ. ಮಳಿ ಇಲ್ಲ, ಬೆಳಿಯಿಲ್ಲ. ಬರಗಾಲ, ಸಾಲ ಅಂತ ಊರು ಬಿಟ್ಟು ಪಟ್ಟಣಕ್ಕೆ ದುಡಿಲಿಕ್ಕೆ ಹೋದೋರು ಭಾಳ ಮಂದಿ ಅದಾರ.ಇನ್ನು ಇಲ್ಲೇ ಇದ್ದೋರು, ದೇವರ ಕೆಲಸ ಅಂತ ಯಾವುದನ್ನು ಬಿಡಲಾರದೆ ಎಷ್ಟಾತೊ ಅಷ್ಟು ಮಾಡ್ತಾರ"ಎಂದು ಹೇಳಿದಳು. ಸ್ವಾತಿ ಆ ಬಗ್ಗೆ ಮಾತು ಮುಂದುವರೆಸುವಷ್ಟರಲ್ಲಿ

ಮುಂದಿನ ಪುಟಕ್ಕೆ


Copyright © KCO – Brindavana

ಸಂಚಿಕೆ
೧೨
ಸೆಪ್ಟೆಂಬರ್, ೨೦೧೭

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

(ಹಿಂದಿನ ಪುಟದಿಂದ)

ಜಾತ್ರೆಯ ಗದ್ದಲದಲ್ಲಿ ತಾಯಿಯನ್ನು ಹುಡುಕುತ್ತಿದ್ದ ಶಿವು ಅಲ್ಲಿಗೆ ಬಂದ. ಸ್ವಾತಿಗೆ ಮಗನನ್ನು ತೋರಿಸಿ, "ಇವ ನನ್ನ ಮಗ ಶಿವು.ಹೊಲಮನಿ ನೋಡ್ಕೋತಾನ.ನನಗ ಇನ್ನೂ ಇಬ್ಬರು ಹೆಣ್ಣು ಮಕ್ಕಳ ಅದಾರ. ಮದುವಿ ಮಾಡ್ಕೊಂಡು ಆರಾಮ ಇದ್ದಾರ"ನಕ್ಕಳು ರೇಣುಕಾ. ಗೆಳತಿಯನ್ನು ಶಿವುಗೆ ಪರಿಚಯಿಸಿದಳು. ತನ್ನ ತಾಯಿಯ ಗೆಳತಿ ಬೆಂಗಳೂರಿನಿಂದ ಬಂದಿರುವುದನ್ನು ತಿಳಿದ ಶಿವು ತಾನೂ ಸಹ ಪಟ್ಟಣಕ್ಕೆ ಬಂದು ಕೆಲಸ ಮಾಡಬೇಕೆಂಬ ಇಚ್ಛೆಯನ್ನು ವ್ಯಕ್ತ ಪಡಿಸಿದಾಗ ರೇಣುಕಾಳ ಕಣ್ಣಲ್ಲಿ ನೋವನ್ನು ಕಂಡಳು ಸ್ವಾತಿ. ಒಂದೆರಡು ನಿಮಿಷ ಮಾತನಾಡಿದ ಶಿವು ತನ್ನ ಸ್ನೇಹಿತರೊಂದಿಗೆ ಇರುವುದಾಗಿ ಹೇಳಿ ಹೋದ. ಶಿವು ಅತ್ತ ಕಡೆ ಹೋದಾಗ, ರೇಣುಕಾಳ ಹತ್ತಿರ ಶಿವುನ ಇಚ್ಛೆಯನ್ನು ಕುರಿತು ಸ್ವಾತಿ ಕೇಳಿದಳು. ಹಲವಾರು ವರ್ಷಗಳ ನಂತರ ಈ ಜಾತ್ರಾ ಮಹೋತ್ಸವದಲ್ಲಿ ಭೇಟಿಯಾದ ಗೆಳತಿಯ ಹತ್ತಿರ ತಮ್ಮ ಬದುಕನ್ನು ಬಿಚ್ಚಿಡಲು ರೇಣುಕಾ ಹಿಂಜರಿದಳಾದರೂ, ಸ್ವಾತಿಯ ಕಣ್ಣಲ್ಲಿನ ಕಾಳಜಿಯನ್ನು ಗುರುತಿಸಿ ತಮ್ಮ ಜೀವನದ ನೋವನ್ನು ಅವಳಲ್ಲಿ ಹೇಳಿಕೊಂಡಳು. ರೈತರ ಸಂಕಷ್ಟಗಳ ವಿಷಯವನ್ನು ಕೇಳುತ್ತಲೇ ಇರುತ್ತಿದ್ದ ಸ್ವಾತಿಗೆ ಗೆಳತಿಯ, ಅವಳ ಊರಿನವರ ಪರಿಸ್ಥಿತಿಯ ಬಗ್ಗೆ ರೇಣುಕಾಳಿಂದಲೇ ತಿಳಿದಾಗ ಅತೀವ ದುಃಖವಾಯಿತು. ತನ್ನ ಮಾತನ್ನು ಮುಂದುವರೆಸಿದ ರೇಣುಕಾ,"ಏನು ಮಾಡಬೇಕೋ ತಿಳಿವಲ್ಲದು. ಶಿವು ನೋಡಿದ್ರ ಪಟ್ಟಣಕ್ಕ ಹೋಗಿ ಕೆಲಸ ಮಾಡ್ತೀನಿ ಅಂತಾನ. ಇಷ್ಟು ವರ್ಷ 'ರೈತ ಅಂದ್ರ ಅನ್ನದಾತ' ಅಂತ ಜೀವನ ಮಾಡ್ಕೊಂಡು ಬಂದ ನಾವು, ಇವತ್ತು ಪಟ್ಟಣಕ್ಕ ಹೋಗಿ ದುಡಿದು ಇನ್ನೊಬ್ಬರ ಮುಂದ ಕೈ ಚಾಚಬೇಕಂದ್ರ ಮನಸ್ಸು ಒಪ್ಪೂದಿಲ್ಲ. ಆದ್ರ ಇನ್ನೊಂದು ಆದಾಯ ಅನ್ನೋದಿಲ್ಲ. ಮಳಿ ಬರಲಿಕ್ಕರ ಸಾಲನ ಗತಿ"ಎಂದು ದುಃಖಿಸಿದಾಗ ಸ್ವಾತಿಯ ಕಣ್ಣಲ್ಲೂ ನೀರು ತುಂಬಿಕೊಂಡಿತ್ತು.

* * *

ಬೆಂಗಳೂರಿಗೆ ಹಿಂದಿರುಗಲು ಬಸ್ಸು ಹತ್ತಿ ಕುಳಿತ ಸ್ವಾತಿಯ ಯೋಚನೆಗಳಲ್ಲೀಗ ರೇಣುಕಾ, ಶಿವು, ಅವರ ಹಳ್ಳಿಯ ರೈತರು ತುಂಬಿಕೊಂಡರು. ಅವರಿಗೆ ಹೇಗೆ ಸಹಾಯ ಮಾಡಬಹುದು? ಸ್ವಲ್ಪ ಹಣ ಒಟ್ಟುಗೂಡಿಸಿ ಕೊಡಬಹುದು. ಜಗತ್ತಿಗೆ ಅನ್ನ ನೀಡೋ ರೈತ ಇನ್ನೊಬ್ಬರ ಮುಂದೆ ಕೈ ಚಾಚುವಂತಾಗುವುದನ್ನು ಅವಳ ಮನಸ್ಸು ಒಪ್ಪಲಿಲ್ಲ."ಇನ್ನೊಂದು ಆದಾಯ ಅನ್ನೋದಿಲ್ಲ, ಮಳಿ ಬರಲಿಕ್ಕರ ಸಾಲನ ಗತಿ"ಎನ್ನುವ ರೇಣುಕಾಳ ಮಾತುಗಳು ನೆನಪಾದವು. ಹೈಸ್ಕೂಲಿನಲ್ಲಿ ಓದುವಾಗ ರೇಣುಕಾ ಹೊಲಿಗೆ,ಕಸೂತಿ,ಡ್ರಾಯಿಂಗ್ ಮಾಡುವುದರಲ್ಲಿ ತಮ್ಮೆಲ್ಲರಿಗಿಂತಲೂ ಜಾಣೆಯಾಗಿದ್ದಳು ಎಂಬುದು ನೆನಪಿಗೆ ಬಂದಿತ್ತು. ರಾತ್ರಿಯ ಪ್ರಯಾಣ ಮುಗಿದು ಬೆಳಿಗ್ಗೆ ಬೆಂಗಳೂರು ತಲುಪುವಷ್ಟರಲ್ಲಿ ತಾನು ಯಾವ ರೀತಿಯಲ್ಲಿ ರೇಣುಕಾಳಿಗೆ ಸಹಾಯ ಮಾಡಬಹುದು ಎಂದುಕೊಂಡ ಕೆಲವು ಕೆಲಸಗಳ ಪಟ್ಟಿ ತಯಾರಿಸಿಕೊಂಡಳು ಸ್ವಾತಿ.ಇದು ಬರೀ ಪ್ರಯತ್ನವೆಂದುಕೊಂಡರೂ, ಪ್ರಾಮಾಣಿಕತೆಯಿಂದ ಮಾಡುವ ಪ್ರಯತ್ನಗಳು ಫಲಕಾರಿಯಾಗಬಹುದೆಂದು ಆಶಿಸಿದ ಸ್ವಾತಿ ಮನೆ ತಲುಪಿ ರೇಣುಕಾಗೆ ಫೋನ್ ಮಾಡಿದಳು.

* * *

ಸ್ವಾತಿಯೊಂದಿಗೆ ಮಾತನಾಡಿದ ನಂತರ ರೇಣುಕಾ ತನ್ನ ಹಳ್ಳಿಯ ಇತರ ರೈತ ಮಹಿಳೆಯರನ್ನೆಲ್ಲ ಕರೆದು ಮಾತನಾಡಿದಳು. ಎಲ್ಲರೂ ತಮ್ಮ,ತಮ್ಮ ಕಷ್ಟದ ಬದುಕನ್ನು ಚರ್ಚಿಸಿಕೊಂಡರು. ಹೈಸ್ಕೂಲಿನಲ್ಲಿದ್ದಾಗ ಬಳಸುತ್ತಿದ್ದು, ಈಗ ಅವಶ್ಯಕತೆ ಇಲ್ಲವೆಂದು ಅಟ್ಟವೇರಿಸಿದ್ದ ಹೊಲಿಗೆ ಯಂತ್ರವನ್ನು ರೇಣುಕಾ ಹೊರತೆಗೆದಳು. ಇತ್ತ ಸ್ವಾತಿ ತನ್ನ ಸ್ನೇಹಿತರಲ್ಲಿ, ಸಹೋದ್ಯೋಗಿಗಳಲ್ಲಿ ತನ್ನ ಈವೊಂದು ಪ್ರಯತ್ನದ ಬಗ್ಗೆ ಮಾತನಾಡಿದಳು. ತನ್ನ ಊರು, ಹೊಲ-ಗದ್ದೆಗಳು, ಅಲ್ಲಿನ ಜನ-ಜೀವನದ ಬಗ್ಗೆ ಸದಾ ಸ್ಪಂದಿಸುತ್ತಿದ್ದ ಸ್ವಾತಿಯ ಈ ಪ್ರಯತ್ನವನ್ನು ಅವಳ ಪತಿ ಮತ್ತು ಮಕ್ಕಳೂ ಪ್ರೋತ್ಸಾಹಿಸಿದರು. ಮೊದಲಿಗೆ ಸ್ವಲ್ಪ ಹಣವನ್ನು ಸಂಗ್ರಹಿಸಿ ಹೊಲಿಗೆ ಯಂತ್ರಗಳನ್ನು, ಕಸೂತಿ, ಹೆಣಿಕೆಗೆ ಬೇಕಾಗುವ ವಸ್ತುಗಳನ್ನು ಖರೀದಿಸಿ, ಬೆಂಗಳೂರಿನಿಂದ ಕನಕಗಿರಿಗೆ ಹೊರಡುವ ಖಾಸಗಿ ಬಸ್ಸಿನಲ್ಲಿ ಕಳುಹಿಸಿ, ಶಿವು ಮತ್ತು ಆತನ ಸ್ನೇಹಿತರು ಅವುಗಳನ್ನು ಸೋಮನಾಳಿಗೆ ತಲುಪಿಸುವಲ್ಲಿ ನೆರವಾಗುವಂತೆ ವ್ಯವಸ್ಥೆ ಮಾಡಿದಳು ಸ್ವಾತಿ. ರೇಣುಕಾಳಿಂದ ಸುಲಭವಾದ, ಸರಳವಾದ ಉಡುಪುಗಳನ್ನು ತಯಾರಿಸಿ ತರಿಸಿ, ತನ್ನ, ಮಕ್ಕಳ, ಪತಿಯ ಸ್ನೇಹಿತರ ಗುಂಪುಗಳಲ್ಲಿಯೇ ಖರೀದಿಸುವಂತೆ ಮನವೊಲಿಸಿದಳು. ಮನೆಯಲ್ಲಿ ಧರಿಸಲಿಕ್ಕಾದರೂ ವಿದೇಶಿ ಬ್ರ್ಯಾಂಡೆಡ್ ಬಟ್ಟೆಗಳ ಬದಲಾಗಿ, ರೇಣುಕಾ ಮತ್ತು ಇತರರು ತಯಾರಿಸಿದ ಉಡುಪುಗಳನ್ನು ಖರೀದಿಸಿ ರೈತ ಮಹಿಳೆಯರನ್ನು ಬೆಂಬಲಿಸಬೇಕೆಂದು ವಿನಂತಿಸಿಕೊಂಡಳು. ಅತ್ತ ರೇಣುಕಾ ತನ್ನ ಮನೆಯಲ್ಲಿ ಆಸಕ್ತಿ ತೋರಿಸಿದ ಮಹಿಳೆಯರಿಗೆ ಹೊಲಿಗೆ ತರಬೇತಿ ನೀಡಿದಳು. ವಿಧ, ವಿಧದ ಕಸೂತಿ, ಸುಂದರವಾಗಿ ಚಿತ್ರ ಬರೆದು ಬಣ್ಣ ತುಂಬುವುದನ್ನು ಹೇಳಿಕೊಟ್ಟಳು. ಹೀಗೆ ಪ್ರಾರಂಭಿಸಿದ ಈ ಪ್ರಯತ್ನವನ್ನು ಮುಂದುವರೆಸಿದ ಸ್ವಾತಿ ತನ್ನ ಆಫೀಸಿನಲ್ಲಿ, ಮಕ್ಕಳ ಶಾಲಾ-ಕಾಲೇಜಿನ ಉತ್ಸವದ ದಿನಗಳಲ್ಲಿ ರೇಣುಕಾ ಮತ್ತಿತರು ತಯಾರಿಸಿದ ಕರಕುಶಲ ವಸ್ತುಗಳ, ಬಣ್ಣ,ಬಣ್ಣದ ಮಣ್ಣಿನ ಕುಡಿಕೆಗಳ ಸ್ಟಾಲ್ ಗಳನ್ನು ಹಾಕಿ ಮಾರಾಟ ಮಾಡುವ ಯೋಚನೆ ಮಾಡಿ ಮಗಳು,ಮತ್ತವಳ ಗೆಳತಿಯರನ್ನೂ ಹುರಿದುಂಬಿಸಿದಳು. ಇದರಿಂದ ಬರುತ್ತಿದ್ದ ಆದಾಯದ ಪ್ರಮಾಣ ಅತಿ ಹೆಚ್ಚಿನದಾಗಿರದಿದ್ದರೂ, ರೇಣುಕಾ ಮತ್ತಿತರ ರೈತ ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿತ್ತು. ಬದುಕುವ ಭರವಸೆಯನ್ನು ಮೂಡಿಸಿತ್ತು. ಅಲ್ಲದೇ ಶಿವು ಮತ್ತು ಆತನ ಗೆಳೆಯರಲ್ಲಿಯೂ ಹೊಸ ಹುರುಪನ್ನು ಹುಟ್ಟಿಸಿತ್ತು. ಅವರೆಲ್ಲ ಹಾಲಿನ ಡೈರಿ,ಕೋಳಿ ಫಾರಂಗಳನ್ನು ಮಾಡಿ ಪರ್ಯಾಯ ಆದಾಯ ಪಡೆಯುವ ಯೋಜನೆಯನ್ನು ಹಾಕಿಕೊಂಡರು.

ರೇಣುಕಾಳ ನೇತೃತ್ವದಲ್ಲಿ ಆ ಹಳ್ಳಿಯಲ್ಲೊಂದು ಪ್ರಗತಿ ಕಂಡಿತ್ತು. ಹೀಗೆ ಸತತ ನಾಲ್ಕು ವರ್ಷಗಳ ಪ್ರಯತ್ನ ಆ ಪುಟ್ಟ ಹಳ್ಳಿಯನ್ನು 'ಮಾದರಿ ಗ್ರಾಮ'ವನ್ನಾಗಿಸಿತ್ತು. ಮತ್ತು ರೇಣುಕಾಳನ್ನು 'ಮಾದರಿ ಗ್ರಾಮೀಣ ಮಹಿಳೆ' ಎಂದು ಎಲ್ಲೆಡೆ ಗುರುತಿಸುವಂತಾಗಿತ್ತು. ಅದೊಂದು ದಿನ ಸ್ವಾತಿಗೆ 'ಸಂಯುಕ್ತ ರಾಷ್ಟ್ರ ಸಂಸ್ಥೆ' ಪ್ರತಿವರುಷ 'ಅಂತರ ರಾಷ್ಟ್ರೀಯ ಗ್ರಾಮೀಣ ಮಹಿಳಾದಿನ'ವನ್ನು ಆಚರಿಸಿ, ಮಾದರಿ ಗ್ರಾಮೀಣ ಮಹಿಳೆಯರನ್ನು ಗುರುತಿಸುವುದೆಂದು ತಿಳಿದುಬಂತು. ರೇಣುಕಾಳ ಹೆಸರನ್ನು ಆ ಸಂಸ್ಥೆಗೆ ಸೂಚಿಸಿ ಅವಳ ಪರಿಶ್ರಮದ ಸಾಧನೆಯನ್ನು ಎಲ್ಲರಿಗೂ ಪರಿಚಯಿಸಬೇಕೆಂದು ಯೋಚಿಸಿ ರೇಣುಕಾಗೆ ಫೋನ್ ಮಾಡಿದಳು ಸ್ವಾತಿ. ತಮ್ಮ ಪ್ರಯತ್ನದ ಪ್ರತಿ ಹೆಜ್ಜೆಯನ್ನು ನೆನೆದ ರೇಣುಕಾ ಇದೆಲ್ಲ ಸಾಧ್ಯವಾಗಿರುವುದು ಸ್ವಾತಿಯಿಂದ ಎನ್ನುತ್ತ ತನ್ನ ಧನ್ಯವಾದಗಳನ್ನು ಹೇಳಿದಳು. ಅದನ್ನು ಪೂರ್ಣವಾಗಿ ಒಪ್ಪದ ಸ್ವಾತಿ, ರೇಣುಕಾ ಮತ್ತು ಅವಳ ಹಳ್ಳಿಯ ರೈತ ಮಹಿಳೆಯರ ಪರಿಶ್ರಮದ ಫಲವೆಂದು ಹೇಳುವಾಗ,ಅಲ್ಲೇ ಪಕ್ಕದಲ್ಲಿದ್ದ ಟಿವಿಯಲ್ಲಿ ಜಿ.ಎಸ್.ಶಿವರುದ್ರಪ್ಪ ಅವರ ಕವನದ ಸಾಲುಗಳು ತೇಲಿ ಬಂದಿದ್ದವು.

**"ನನಗಿಲ್ಲ ನಾನೊಬ್ಬನೇ ಬದುಕುವ ದಾಹ,**
**ನಾಳೆ ಬೆಳೆದೀತು ಹೊಸ ಮಣ್ಣಿನಲ್ಲಿ ಬೇರೂರಿ |**
**ನನ್ನಲ್ಲಿರುವ ಒಳಿತೇನಾದರೂ,**
**ಕೊಂಬೆ-ರೆಂಬೆಗೆ ಪುಟಿದು ಹೊಸ ಹೂವು-ಚಿಗುರು. . ."**

## ಕವನ

### *ಗಣಪ ಸ್ತುತಿ*



ವಿದ್ಯಾ ಪ್ರಶಾಂತ್

ಬಂದ ನೋಡಿ ಬಾಲರ ಗಣಪ
ಮುದದಿ ಎಲ್ಲರ ಹರಸಲು
ವರಗಳ ನೀಡಿ ಬಾಳನು ಬೆಳಗಿ
ಅನುದಿನ ನಮ್ಮನು ಪೊರೆಯಲು

ಭಾದ್ರಪದ ಶುಕ್ಲ ಚೌತಿಯ ದಿನದಿ
ಭಜಿಪ ಭಕ್ತರ ಸಲಹುವಾ
ಮನಧಾಭೀಷ್ಟವ ಪೂರೈಸುವೆನೆಂದು
ಕೃಪೆಯಾ ತೋರಿ ಕಾಯುವ

ಆದಿ ಪೂಜಿತ ಲೋಕ ವಂದಿತ
ವಿಘ್ನ ನಾಶಕ ವಿನಾಯಕ
ವಿದ್ಯಾ ಬುದ್ಧಿಯ ವರಗಳ ನೀಡಿ
ಅಜ್ಞಾನವ ಕಳೆಯೋ ಗಣನಾಯಕ
ಪರಶಿವ ನಂದನ ಪಾಪ ವಿನಾಶನ
ಪಾರ್ವತಿ ಕುವರ ಲಂಬೋದರ
ಕಷ್ಟವ ಕಳೆದು ಭಕುತರ ಪೊರೆವ
ಷಣ್ಮುಖ ಸೋದರ ಲಕುಮಿಕರ

ಕಾಯೋ ಎಮ್ಮನು ಕರುಣದಿ
ಪೂಜಿಪೆವೆಂದಿಗು ಹರುಷದಿ
ದಯೆಯಾ ತೋರಿ ಪಾಲಿಸು
ಎಮಗೆ ಸಾರ್ಥಕತೆಯ
ಈ ಜೀವನದಿ.


Copyright © KCO – Brindavana

## *ಸಾರ್ವಜನಿಕ ಗಣೇಶೋತ್ಸವ*



ಭಾಸ್ಕರ ತೈಲಗೇರಿ

**ಸ್ವಾ**ತಂತ್ರ್ಯ ಪೂರ್ವ-ಭಾರತದಲ್ಲಿ ಬ್ರಿಟಿಷರು ಸಾರ್ವಜನಿಕ ಸಭೆ ನಡೆಸುವುದನ್ನು ನಿಷೇಧ ಮಾಡಿದ್ದರು. ಧಾರ್ಮಿಕ ವಿಚಾರದಲ್ಲಿ ಸ್ವಲ್ಪ ಈ ನಿಷೇಧದ ಬಗ್ಗೆ ಸ್ವಲ್ಪ ಸಡಿಲವಾಗಿದ್ದರು. ಲೋಕಮಾನ್ಯ ಬಾಲಗಂಗಾಧರ ತಿಲಕ್ ಗಣೇಶ ಹಬ್ಬದ ಸಮಯದಲ್ಲಿ ಸಾರ್ವಜನಿಕ ಗಣೇಶೋತ್ಸವ ಕಾರ್ಯಕ್ರಮ ಶುರು ಮಾಡಿ ಅಲ್ಲಿ ಸ್ವಾತಂತ್ರ್ಯ ಹೋರಾಟದ ಸಭೆ ನಡೆಸಿ ದೇಶಾಭಿಮಾನದ ಕಿಚ್ಚನ್ನು ಹಚ್ಚಿಸಿದರು. ಈ ಸಾರ್ವಜನಿಕ ಗಣೇಶೋತ್ಸವ ಬಹು ಜನಪ್ರಿಯವಾಗಿ ಸ್ವಾತಂತ್ರ್ಯ ಬಂದ ನಂತರವೂ ಮುಂದುವರಿದುಕೊಂಡು ಹೋಯಿತು. ಹೆಚ್ಚಾಗಿ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಗಣೇಶೋತ್ಸವವನ್ನು ಆಚರಿಸುತ್ತಾರೆ. ಮುಂಬೈನ ಗಲ್ಲಿಗಲ್ಲಿಗಳಲ್ಲಿ ತುಂಬಾ ವಿಜೃಂಭಣೆಯಿಂದ ಗಣೇಶೋತ್ಸವ ಆಚರಿಸುತ್ತಾರೆ. ಸಾಮಾನ್ಯವಾಗಿ ಹತ್ತು ದಿನಗಳ ಕಾರ್ಯಕ್ರಮ ಆಯೋಜಿಸಿರುತ್ತಾರೆ. ಬಾಲಿವುಡ್ ತಾರೆಯರು, ಕ್ರಿಕೆಟ್ ತಾರೆಯರು ಈ ಸಮಾರಂಭಗಳಿಗೆ ಭೇಟಿ ಕೊಟ್ಟು ಗಣೇಶನ ದರ್ಶನ ಪಡೆಯುತ್ತಾರೆ. ಈ ವರ್ಷ ನ್ಯೂಜೆರ್ಸಿಯ ಎಡಿಸನ್ ಊರಿನಲ್ಲೂ ಒಂದು ಮಾಲ್ ಪಾರ್ಕಿಂಗ್ ಲಾಟ್ ನಲ್ಲಿ ದೊಡ್ಡ ಪೆಂಡಾಲ್ ಹಾಕಿ ೧೪ ಅಡಿ ಗಣೇಶನ ಕೂಡಿಸಿ ವೈಭವದಿಂದ ಗಣೇಶೋತ್ಸವವನ್ನು ಆಚರಿಸಿದರು.

ನಾನು ಬಾಲಕನಾಗಿದ್ದಾಗ ಗೆಳೆಯರೊಡನೆ ಕೂಡಿ ಗಣೇಶೋತ್ಸವ ಆಚರಿಸಿದ ಬಗ್ಗೆ ನಿಮ್ಮೊಡನೆ ಹಂಚಿಕೊಳ್ಳಬೇಕೆನಿಸಿತು.

ಗಣೇಶ ಹಬ್ಬ ಇನ್ನೂ ಒಂದು ತಿಂಗಳು ಇರಬೇಕಾದರೇನೇ ಚಂದಾ ವಸೂಲಿ ಶುರು ಮಾಡಬೇಕು. ರಸೀದಿ ಪುಸ್ತಕ ಖರೀದಿಸಿ, ಕಲೆಕ್ಷನ್ ಡಬ್ಬ ರೆಡಿ ಮಾಡಿ ಕಲೆಕ್ಷನ್ ಗೆ ಹೊರಡುತ್ತಿದ್ದೆವು. ಇದು ತುಂಬಾ ಕಷ್ಟದ ಕೆಲಸ. ನಾವು ಚಿಕ್ಕ ಹುಡುಗರು ಬೇರೆ, ಕಲೆಕ್ಷನ್ ಆಗುತ್ತಿದಿದ್ದು ಕಮ್ಮಿ. ನಾನಾ ಕಾರಣ ಕೊಟ್ಟು ಚಂದಾ ಕೊಡದೆ ಮುಂದೆ ಕಳಿಸುತ್ತಿದ್ದರು. ಕೆಲವರು ನಾವು ಮುಸ್ಲಿಮ್ಸ್, ಕ್ರಿಶ್ಚಿಯನ್ಸ್, ನಾವು ಗಣೇಶ ಹಬ್ಬ ಮಾಡೋದಿಲ್ಲ ಅಂತ, ಇನ್ನು ಕೆಲವರು ನೆನ್ನೆ ತಾನೇ ಯಾರೋ ಬಂದಿದ್ದರು, ಅವರಿಗೆ ದುಡ್ಡು ಕೊಟ್ಟೆವು ಅಂತಾನೋ ಕಾರಣಗಳನ್ನು ಕೊಡುತ್ತಿದ್ದರು. ಕೆಲವರು ದರ್ಪದಿಂದ ಮುಂದೆ ಹೋಗಿ, ಹೋಗ್ತಾ ಸರಿಯಾಗಿ ಗೇಟ್ ಹಾಕೊಂಡು ಹೋಗಿ ಅಂತ ಗದರಿಸಿದ್ದೂ ಇದೆ. ಗೇಟ್ ಮೇಲೆ "ನಾಯಿಗಳಿವೆ ಎಚ್ಚರಿಕೆ" ಅಂತ ಬೋರ್ಡ್ ಇದ್ದರೆ, ಇರುವುದೊಂದು ನಾಯಿ, ನಾಯಿಗಳಿವೆ ಅಂತ ಯಾಕೆ ಬೋರ್ಡ್ ಹಾಕಿದ್ದಾರೆ ಅಂತ ಯೋಚಿಸುತ್ತಿದ್ದೆವು. ನಾನಂತೂ ನಾಯಿ ಇರೋ ಮನೆ ಗೇಟ್ ತೆಗೆಯೋ ಸಾಹಸ ಮಾಡ್ತಾ ಇರಲಿಲ್ಲ. ಕೆಲವರು ಬರಿ ಚಿಲ್ಲರೆಯನ್ನು ಡಬ್ಬದೊಳಗೆ ಹಾಕುತ್ತಿದ್ದರು. ಮರೆಯಲಾಗದ ಅನುಭವ ಅಂದರೆ ಭಾರತದ ಟೆಸ್ಟ್ ಕ್ರಿಕೆಟ್ ಬ್ಯಾಟ್ಸಮನ್ ಸೂಪರ್ ಸ್ಟಾರ್ ಜಿ. ಆರ್. ವಿಶ್ವನಾಥ್ ರವರ ಮನೆಗೆ ಹೋದಾಗ, ಅವರೇ ಬಾಗಿಲು ತೆಗೆದು ಚಂದಾ ಹಣವನ್ನು ಕೊಟ್ಟಿದ್ದರು. ಅದೇ ರೀತಿ ಕಲಾಕೇಸರಿ ಉದಯ್ ಕುಮಾರ್ ರವರನ್ನು ಈ ಕಲೆಕ್ಷನ್ ನೆಪದಲ್ಲಿ ನೋಡಿದ ನೆನಪು. ಮನೆಗಳಲ್ಲಿ ಚಂದಾ ವಸೂಲಿ ನಂತರ ಅಂಗಡಿಗಳಿಗೆ ಕಲೆಕ್ಷನ್ ಗೆ ಹೋಗುತಿದ್ದೆವು. ಅವರು ಸ್ವಲ್ಪ ಧಾರಾಳವಾಗಿ ಚಂದಾ ಕೊಡುತ್ತಿದ್ದರು.

ಗಣೇಶ ಹಬ್ಬ ೨ ವಾರ ಇರುವಾಗ ಬೇರೆ ಚಟುವಟಿಕೆಗಳು ಶುರು. ಪೆಂಡಾಲ್ ಬುಕ್ ಮಾಡುವುದು ಮತ್ತು ಗಣೇಶ ಮೂರ್ತಿಯನ್ನು ರಿಸರ್ವ್ ಮಾಡುವುದು. ತುಂಬಾ ದೊಡ್ಡ ಗಣೇಶ ತರುವುದಕ್ಕೆ ಬಜೆಟ್ ಇರುತ್ತಿರಲಿಲ್ಲ. ೩ ಅಡಿ ಗಣೇಶನ ಮೂರ್ತಿ ತರುತ್ತಿದ್ದ ನೆನಪು. ಡೆಕೋರೇಷನ್ ಗೆ ಬಣ್ಣದ ಕಾಗದದ ಆಕೃತಿಗಳು, ತೋರಣಗಳು, ಹೀಗೆ ತಂದು



ಹಬ್ಬದ ಹಿಂದಿನ ದಿನ ಶಾಲೆಯಿಂದ ಬೇಗ ಬಂದು ಗಣೇಶ ಇಡುವ ಜಾಗವನ್ನು ಸ್ವಚ್ಚಗೊಳಿಸಿ, ಪೆಂಡಾಲ್ ಹಾಕಿಸಿ, ಮಂಟಪ ಇಟ್ಟು ರೆಡಿಯಾಗುತ್ತಿದ್ದೆವು. ಒಂದು ಸಲ ಜೋರಾಗಿ ಮಳೆ ಬಂದು ಕೊಚ್ಚೆಯಾದಾಗ ಕೇಳಬೇಡಿ ನಮ್ಮ ಪರಿಸ್ಥಿತಿ. ನಾವು ಈ ಹಬ್ಬವನ್ನು ಮೂರು ದಿವಸ ಆಚರಿಸುತ್ತಿದ್ದೆವು. ಬೆಳಗ್ಗೆ ನಮ್ಮ ಸ್ನೇಹಿತನೊಬ್ಬ ಗಣೇಶ ಪೂಜೆ ಮಾಡುತಿದ್ದ. ನೆರೆಹೊರೆಯಲ್ಲೊಬ್ಬರು ಪ್ರಸಾದ ಮಾಡುತ್ತಿದ್ದರು. ಮೊದಲ ದಿನ ಸಂಜೆ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ . ಎರಡನೆಯ ದಿನ ರಾಜಕುಮಾರ್ ಸಿನಿಮಾ ಪ್ರದರ್ಶನ. ಮೂರನೆಯ ದಿನ ಮೆರವಣಿಗೆ ಮತ್ತು ವಿಸರ್ಜನೆ.

ನಮ್ಮ ಮನೆಯ ಹತ್ತಿರ ಸಂಗೀತ ಹೇಳಿಕೊಡುವವರೊಬ್ಬರನ್ನು ಕರೆಸಿ ಹಾಡಿಸುತ್ತಿದ್ದೆವು. ಶಾಸ್ತ್ರೀಯ ಸಂಗೀತಕ್ಕೆ ಹೆಚ್ಚು ಜನ ಸೇರುತ್ತಿರಲಿಲ್ಲ. ಆ ಕಾಲದಲ್ಲಿ ಆರ್ಕೆಸ್ಟ್ರ ದೇ ಜಮಾನ. ಬ್ಲೂ ಬಾಯ್ಸ್, ಮೋಹನ್ ಜಿಂಪೆಟ್ಸ್, ಸೌಂಡ್ ಆಫ್ ಮ್ಯೂಸಿಕ್ ಆರ್ಕೆಸ್ಟ್ರಗಳಿಗೆ ಜನ ಮುಗಿ ಬಿಳ್ತಾಯಿದ್ದರು.

ಒಮ್ಮೆ ನಾವು "ಬಾಲನಾಗಮ್ಮ" ಸಿನಿಮಾ ಬುಕ್ ಮಾಡಿ, ಎಲ್ಲಾ ಕಡೆ "ವೀರ ಕೇಸರಿ" ಸಿನಿಮಾ ಪ್ರದರ್ಶನ ಅಂತ ಸುಳ್ಳು ಪ್ರಚಾರ ಮಾಡಿದ್ದೆವು. ತುಂಬಾ ಜನ ಸೇರಿದ್ದರು. ಸಿನಿಮಾ ಶುರು ಆಗುವ ಸಮಯದಲ್ಲಿ, ಅನಿವಾರ್ಯ ಕಾರಣಗಳಿಂದ "ವೀರ ಕೇಸರಿ" ಸಿನಿಮಾ ತೋರಿಸಲಾಗುವುದಿಲ್ಲ, ಅದರ ಬದಲು "ಬಾಲನಾಗಮ್ಮ" ಸಿನೆಮಾವನ್ನು ನೋಡಿ ಆನಂದಿಸಿ ಅಂತ ಅನೌನ್ಸ್ ಮಾಡಿದೆವು. ಎಷ್ಟು ಜನ ಬೇಸರ ಮಾಡಿಕೊಂಡಿದ್ದರೋ ಗೊತ್ತಿಲ್ಲ.

ಮೂರನೇ ದಿನ ಮೆರವಣಿಗೆ ಮತ್ತು ವಿಸರ್ಜನೆ. ಮೊದಲ ಕೆಲ ವರ್ಷಗಳು ತರಕಾರಿ ಮಾರುವವರ ಹತ್ತಿರ ಅವರ ಗಾಡಿಯನ್ನು ಬಾಡಿಗೆಗೆ ಪಡೆದು, ಅದಕ್ಕೆ ಅಲಂಕಾರ ಮಾಡಿ ಗಣೇಶನನ್ನು ಅದರಲ್ಲಿ ಇಟ್ಟು ಮೆರವಣಿಗೆಗೆ ಹೋಗುತ್ತಿದ್ದೆವು, ಆಗ ಎಲ್ಲರ ಬಾಯಲ್ಲಿ ಒಂದೇ ಹಾಡು

***ಗಣೇಶ ಬಂದ***
***ಕಾಯಿ ಕಡುಬು ತಿಂದ***
***ಚಿಕ್ಕ ಕೆರೇಲಿ ಬಿದ್ದ***
***ದೊಡ್ಡ ಕೆರೇಲಿ ಎದ್ದ!!***

ಒಮ್ಮೆ ಮಾತ್ರ ಒಬ್ಬ ಸ್ನೇಹಿತನ ಸೋದರಮಾವನವರ ಲಾರಿಯನ್ನು ಸ್ವಚ್ಚ ಗೊಳಿಸಿ ಅದರಲ್ಲಿ ಮೆರವಣಿಗೆ ಮಾಡಿದ ನೆನಪು. ಸಂಜೆ ೫-೬ ಬೀದಿಗಳಲ್ಲಿ ಮೆರವಣಿಗೆ ಮಾಡಿ, ಜಯನಗರದ ರಾಗಿಗುಡ್ಡದಲ್ಲಿ ಒಂದು ದೊಡ್ಡ ತೊಟ್ಟಿಯಲ್ಲಿ ಗಣೇಶ ಮೂರ್ತಿಯನ್ನು ವಿಸರ್ಜಿಸುತ್ತಿದ್ದೆವು.

ಬಾಲ್ಯದ ನೆನಪುಗಳೇ ಮಧುರ!




Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## *"ಏನ ಬೇಡಲಿ ದೇವ ನಿನ್ನ ಬಳಿ ಬಂದು"*



ಉಮಾ ಕಾರಂತ್

**ಶ್ರಾ**ವಣ ಮಾಸ ಬಂತೆಂದರೆ ಹಬ್ಬದ ಸಡಗರ ಪ್ರಾರಂಭ. ಪ್ರತೀ ಹಬ್ಬವೂ ಏನೋ ಒಂದು ರೀತಿಯಲ್ಲಿ ವಿಶೇಷ. ಕೆಲವೊಮ್ಮೆ ಕುಟುಂಬದವರೊಂದಿಗೆ,ಇನ್ನೊಮ್ಮೆ ಸ್ನೇಹಿತರೊಂದಿಗೆ ಆಚರಿಸಿರಬಹುದು. ಒಮ್ಮೆ ಎಲ್ಲಾ ಸಾಂಪ್ರದಾಯಿಕ ಅಡುಗೆ, ತಿಂಡಿಗಳಿಂದ ಕೂಡಿದ್ದರೆ, ಇನ್ನೊಮ್ಮೆ ಸರಳ ಪೂಜೆಯೊಂದಿಗೆ ದೇವರಿಗೆ ನಮಸ್ಕರಿಸಿರಬಹುದು. ಮೊದ ಮೊದಲು ಆಡಂಭರತೆಯಿಂದ ಶುರುವಾಗಿದ್ದು ಇತ್ತೀಚೆಗೆ ಭಕ್ತಿಯತ್ತ ಹರಿಯುತ್ತಿದೆ.

ಈ ಸಲದ ಜನ್ಮಾಷ್ಟಮಿಯ ಆಚರಣೆ ಯೂರೋಪ್ ಪ್ರವಾಸದಲ್ಲಿದ್ದಾಗ ಮಾಡಬೇಕಾಯಿತು. ವಿಶ್ವದ ಯಾವುದೇ ಮೂಲೆಯಲ್ಲಿದ್ದರೂ ವಾಟ್ಸಪ್ಪ್ ಸಂದೇಶ ನಮ್ಮನ್ನು ಬಿಡುವುದಿಲ್ಲ. ಪ್ರತೀ ಗುಂಪಿನಿಂದಲೂ ಶ್ರೀ ಕೃಷ್ಣನ ಭಾವಚಿತ್ರ, ಸಂದೇಶ ಹರಿದು ಬಂದವು. ಮುದ್ದು ಮುಖದ ಬಾಲಕೃಷ್ಣನನ್ನು ನೋಡುತ್ತಿದ್ದಂತೆ ಎಷ್ಟೋ ವಿಷಯಗಳನ್ನು ಅರುಹಬೇಕೆಂದುಕೊಂಡೆ. ಅಷ್ಟರಲ್ಲಿ ಪ್ಯಾರಿಸ್ ನೋಡುವ ಸಮಯವಾಗಿತ್ತು. ಹೊರ ಹೊರಟೆವು.

ಪ್ಯಾರಿಸ್ ನ ಹಲವು ಭಾಗಗಳ ದರ್ಶನ ಪ್ರಾಪ್ತವಾಯ್ತು. ಐಫೆಲ್ ಟವರ್, ಆರ್ಕ್ ಡಿ ಟ್ರಿಯೊಂಫ್ ಮೇಲೆ ಎತ್ತರಕ್ಕೆ ಹೋದಷ್ಟು ಪ್ಯಾರಿಸ್ ಸುಂದರವಾಗಿ ಕಾಣಿಸುತ್ತಿತ್ತು. ಆದರೆ ಕೆಳಗಿನ ನೋಟವೇ ಬೇರೆ. ಎಲ್ಲೆಂದರಲ್ಲಿ ಸಂಸಾರ ಸಮೇತರಾಗಿ ಕುಳಿತಿರುವ ನಿರಾಶ್ರಿತರು. ಕೆಲವರಿಗೆ ಹಾಸಿಗೆ ಇದ್ದರೆ, ಇನ್ನು ಕೆಲವರಿಗೆ ಒಂದೇ ಹೊದಿಕೆ. ಮುಗ್ಧ ಮಕ್ಕಳು ಹೊರ ಪ್ರಪಂಚದ ಪರಿವೆಯೇ ಇಲ್ಲದೆ ಅಲ್ಲಲ್ಲೇ ಆಟವಾಡುತ್ತಿದ್ದರು. ಬಾಲೆಯರು ಅಮ್ಮನಿಗೆ ಒರಗಿ ಮುಂದೇನು ಎನ್ನುವ ನೋಟ ಬೀರುತ್ತಿದ್ದಂತೆ ಕಂಡುಬಂತು. Avenue des Champs-Élysées ತಲುಪಿದ್ದಂತೆಯೇ ಬೋರ್ ಎಂದು ಮಳೆ ಸುರಿಯಲಾರಂಭಿಸಿತು. ಕೂಡಲೇ ಕೆಲವೊಂದು ಸಂಸಾರ ಅಂಗಡಿಯ ಕಿಟಕಿಗಳನ್ನು ಆಶ್ರಯಿಸಿದವು. ದೃಶ್ಯ ನೋಡಿ ಮನದಲ್ಲಿ ತಳಮಳ. ಶ್ರೀ ಕೃಷ್ಣನಲ್ಲಿ ಏನೆಲ್ಲಾ ಬೇಡಿಕೊಳ್ಳಬೇಕೆಂದಿದ್ದೆ. ಒಳ್ಳೆಯ ಕಾಲೇಜ್, ಒಳ್ಳೆಯ ಕೆಲಸ ... ಇತ್ಯಾದಿ. ನಿರಾಶ್ರಿತ ಮಕ್ಕಳ ಮುಗ್ಧ ಮುಖಗಳು ಕಣ್ಣೆದುರು ಬಂದವು. ಎಲ್ಲೋ ಯುದ್ಧ, ಯಾರದ್ದೋ ತಪ್ಪು ಇನ್ಯಾರೋ ಅನುಭವಿಸುವುದು. ಬೇಡಿದೆ ಶ್ರೀ ಕೃಷ್ಣನ, "ಪ್ರಣತ್ ಕ್ಲೇಶ ನಾಶಾಯ ಗೋವಿಂದಾಯ ನಮೋ ನಮಃ". ಕಾಪಾಡು ದೇವರೇ ಎಂದು ಯಾವಾಗಲೂ ಬೇಡುವ ನಾನು, ಆಗೊಮ್ಮೆ ಈಗೊಮ್ಮೆ ಹೆಚ್ಚುವರಿ ಬೇಡಿಕೆ ಇಟ್ಟಿದ್ದುಂಟು. ಮೊದಲೆಲ್ಲಾ ಪರೀಕ್ಷೆ ಸುಲಭವಾಗಲೆಂದು, ಭಾರತ ಪಾಕಿಸ್ತಾನದೆದುರು ಗೆಲ್ಲಬೇಕೆಂದು, ಮಿಂಚು ಗುಡುಗುಗಳ ಆರ್ಭಟ ನಿಲ್ಲಬೇಕೆಂದು, ಮಕ್ಕಳ ವಿದ್ಯಾಭ್ಯಾಸ ಚೆನ್ನಾಗಿರಲೆಂದು, ಹಾಗು ಇತ್ತೀಚಿನ ದಿನಗಳಲ್ಲಿ ಭಯೋತ್ಪಾದನೆ ಹಾವಳಿ ಇರಬಾರದೆಂದು ... ಬೇಡಿದ್ದಿದೆ. ಹೀಗೆಯೇ ಹಿಂದೊಮ್ಮೆ ಆನೆಗುಡ್ಡೆ ಶ್ರೀ ವಿನಾಯಕ ದೇವಸ್ಥಾನಕ್ಕೆ ವಿಘ್ನಗಳನ್ನು ನಿವಾರಿಸು ಎಂದು ಬೇಡಲು ಹೋಗಿದ್ದಾಗ ಹತ್ತಾರು ಮಕ್ಕಳು ಹೂವು, ದೂರ್ವೆಗಳನ್ನು ಮಾರುತ್ತಿದ್ದು, ಬಂದ ಹಣವನ್ನು ಒಂದು ಕಡೆ ಕುಳಿತು ಎಣಿಸುತ್ತಿದ್ದರು. ಶಾಲಾ ಸಮಯ ಕೇಳಿದೆ, ಶಾಲೆಗೆ ಹೋಗುವುದಿಲ್ಲವೇ? ಎಂದು. ಮಕ್ಕಳು ಉತ್ತರಿಸಲಿಲ್ಲ. ಬದಲಾಗಿ, "ದೂರ್ವೆ ಬೇಕೆ?" ಎಂದು ಕೇಳಿದರು. ನಾಲ್ಕು ಕಟ್ಟುಗಳನ್ನು ತೆಗೆದುಕೊಂಡು ಅರ್ಚನೆಗೆ ಬಂದೆ. ಏನು ಬೇಡಲಿ ವಿನಾಯಕನನ್ನು?. ಅಷ್ಟೋತ್ತರದಲ್ಲಿ ಕೇಳಿಬಂದದ್ದು "ಓಂ ದೂರ್ವಾ ಬಿಲ್ವ ಪ್ರಿಯಾಯ ನಮಃ". ಓ ಸಿದ್ಧಿ ವಿನಾಯಕನೇ, ದೂರ್ವೆಯನ್ನು ಮಾರುವ ಮಕ್ಕಳಿಗೆ ಯಾವುದೇ ತೊಂದರೆ ಇಲ್ಲದೇ ವಿದ್ಯಾಭ್ಯಾಸ ಸಿಗುವಂತಾಗಲಿ ಎಂದು ಬೇಡಿತ್ತು ಮನಸ್ಸು. ಪ್ರತೀ ಸಲ ಆನೆಗುಡ್ಡೆಗೆ ಹೋಗುವಾಗ ಮನಸ್ಸು ಯಾವುದೇ ದೂರ್ವೆ ಮಾರುವ ಮಕ್ಕಳು ಕಾಣದೇ ಇರಲಿ ಎಂದು ಪ್ರಾರ್ಥಿಸುತ್ತದೆ. ಪ್ರಾರ್ಥನೆಯಂತೆ ಮಕ್ಕಳೇನೋ ಕಾಣಲಿಲ್ಲ. ಆದರೆ ನಾಲ್ಕು ವರುಷಗಳ ಹಿಂದೆ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಹೋಗುವಾಗ ಕೃಶ ದೇಹಿಯೊಬ್ಬ ನನ್ನ ಮಗನ ಹತ್ತಿರ ಬಂದು ಏನೋ ಹೇಳಿ ಅಳತೊಡಗಿದ, ಅಲ್ಲಿಯೇ ಇನ್ನೊಂದು ಕಡೆ ಮೈ ಮೇಲೆ ಯಾವುದೇ ಬಟ್ಟೆಯಿಲ್ಲದ ಬಡ ದೇಹವೊಂದು ನಿದ್ರಿಸುತ್ತಿತ್ತು. ನನ್ನ ಮಗ ಅಳುತ್ತಲೇ ಅವರಿಗೆ ಊಟ ಮಾಡಿ ಎಂದು ಹಣ ಕೊಟ್ಟಾಗ ಸಿದ್ದಾರ್ಥ, ಗೌತಮ ಬುದ್ಧನಾಗಿ ಹೇಗೆ ಬದಲಾದನೆಂದು ಅರಿವಾಯಿತು. ಅಮ್ಮನವರ ಮುಂದೆ ಕಣ್ಮುಚ್ಚಿ ನಿಂತಾಗ ಏನೂ ಬೇಡಲು ತೋಚಲಿಲ್ಲ. ಮನಸ್ಸಿಗೆ ಬಂದಿದ್ದು ಒಂದೇ ಶ್ಲೋಕ. "ಸರ್ವ ದುಃಖ ಹರೇ ದೇವಿ ಮಹಾಲಕ್ಷ್ಮಿ ನಮೋಸ್ತುತೆ".

ಎರಡು ವರುಷಗಳ ಹಿಂದಿನ ಅನುಭವ. ಅಮೇರಿಕಾದ ದೇವಸ್ಥಾನವೊಂದಕ್ಕೆ ಬೆಳಗಿನ ಜಾವದ ಪೂಜೆಗೆಂದು ಹೋಗಿದ್ದೆವು. ಪೂಜಾ ನಂತರ, ದೇವರ ಕೃಪೆಯಿಂದ ಬೆಳಗಿನ ಉಪಾಹಾರಕ್ಕೆ ಕರೆ ಬಂತು. ಭೋಜನ ಶಾಲೆಗೆ ಹೋಗಿ ಕುರ್ಚಿ ಮೇಜುಗಳನ್ನು ಬಳಸಿ ತಿಂಡಿಗೆ ಕುಳಿತಾಗ ದೇವಸ್ಥಾನದ ದ್ವಾರಪಾಲಕ ಭೋಜನ ಶಾಲೆಯ ಮೂಲೆಯಲ್ಲಿ ಉಪಹಾರಕ್ಕೆ ನೆಲದ ಮೇಲೆ ಕುಳಿತದ್ದು ಕಂಡುಬಂತು. ಅವನ ತಟ್ಟೆಗೆ ಇಡ್ಲಿಯ ರಾಶಿ ಹಾಕಿ ಒಂದರ ಮೇಲೆ ಒಂದರಂತೆ ಚಟ್ನಿ, ಸಾಂಬಾರುಗಳನ್ನು ಸ್ವಯಂಸೇವಕಿಯೊಬ್ಬರು ಸುರಿದರು. ಆತ ಸಾಕು - ಸಾಕು ಎಂದರೂ ಸುರಿದು ಹೋದರು. ತಟ್ಟೆಯಲ್ಲಿ ಇಡ್ಲಿ ಯಾವುದು, ಚಟ್ನಿ ಯಾವುದು, ಸಾಂಬಾರು ಹೇಗೆ ಬೇರೆ ಮಾಡುವುದು ಎಂದು ಆತ ಬಗೆ ಬಗೆಯಲ್ಲಿ ಚಿಂತಿಸುತ್ತಾ ತಿಂಡಿ ತಿನ್ನುವುದನ್ನೇ ಮರೆತಿದ್ದ. ಏಕೋ ಏನೋ ಅವನು ನಮ್ಮ ಕಡೆ ತಿರುಗಿ ತಟ್ಟೆಯತ್ತ ಕೈ ತೋರಿಸಿ ನೋಡಿದಾಗ ಅವನ ನೋಟ ಏನೋ ಹೇಳಬಯಸಿದಂತಿತ್ತು. ಸಮಾನತೆ, ಗೌರವವನ್ನು ಹುಡುಕುತ್ತಿದ್ದನೇ? ಪ್ರೀತಿಯಿಂದ ಬಡಿಸಿ ಎಂದನೇ? ತಿಳಿಯದಾದೆ. ಒಮ್ಮೆ ಅವನೊಂದಿಗೆ ಕುಳಿತುಕೊಳ್ಳಲೇ, ಆತನೊಂದಿಗೆ ಸಂಭಾಷಣೆ ಬೆಳೆಸಲೇ ಎಂದು ಆಲೋಚಿಸಿದೆ. ಆದರೆ ಅದರಿಂದ ಅವನ ಕೆಲಸಕ್ಕೆ ಆಪತ್ತಾದರೆ, ಅವನನ್ನು ನಂಬಿದ ಕುಟುಂಬವಿರಬಹುದಲ್ಲಾ. ಜೊತೆಗೆ ಸ್ವಯಂಸೇವಕಿಯ ಕಣ್ಣು ಅವನ ಮೇಲೆಯೇ ಇತ್ತು. ನನ್ನಿಂದ ಆತನಿಗೆ ತೊಂದರೆಯಾಗಬಾರದೆಂದು ಹಿಂಜರಿದೆ. ಹೊರಡುವ ಮುನ್ನ ದೇವರ ಮುಂದೆ ಮತ್ತೊಮ್ಮೆ ನಿಂತಾಗ ಏನು ಬೇಡಲಿ? "ತಾಯಿ ಶ್ರೀ ಲಲಿತೆ, ನಿರ್ಭೇಧಾ ಬೇಧ ನಾಶಿನಿ, ನಿನ್ನ ನಾಮಾವಳಿಯ ಪಠಿಸಿದವರಿಗೆ ಅರ್ಥವಾಗಲಿ, ನೀನೇ ಪರಮ ಶಕ್ತಿ, ನೀನು ಸರ್ವ ಬೇಧರಹಿತಳು ಮತ್ತು ಸರ್ವ ಬೇಧವನ್ನು ತತ್ವ ಜ್ಞಾನದ ಮೂಲಕ ನಾಶ ಮಾಡುವವಳು" ಎಂದು.

ಇಂಥಹ ಅನೇಕ ಅನುಭವಗಳು ನಮ್ಮ ಬದುಕನ್ನು ಸಾಣೆಗೆ ಹಿಡಿಯುತ್ತವೆ. ಆಶ್ರಯ, ಆಹಾರ, ಆರೋಗ್ಯ, ವಿದ್ಯೆ, ಸಮಾಜದಲ್ಲಿ ಸಮಾನತೆ, ಗೌರವ ಎಲ್ಲವನ್ನೂ ಕೊಟ್ಟಿರುವ ಭಗವಂತನನ್ನು ನೆನೆದರೆ ಅದೇ ಹಬ್ಬ. ಕೂಡಿ ಆಚರಿಸುವುದೇ ಸಂಭ್ರಮ. ಬೇಡಿಕೆ ಒಂದೇ ಒಂದು, "ಲೋಕಾಃ ಸಮಸ್ತಾಃ ಸುಖಿನೋ ಭವಂತು". ನೆನಪಾಗುತ್ತಿದೆ ಶಾಲೆಯಲ್ಲಿ ಕಲಿತ ಶ್ರೀ ಕನಕದಾಸರ ಹರಿ ಭಕ್ತಿ ಸಾರದ ಕೆಲವು ತುಣುಕುಗಳು:

ಗಿಳಿಯ ಮರಿಯನು ತಂದು ಪಂಜರ
ದೊಳಗೆ ಪೋಷಿಸಿ ಕಲಿಸಿ ಮೃದುನುಡಿ
ಗಳನು ಲಾಲಿಸಿ ಕೇಳ್ವ ಪರಿಣತರಂತೆ ನೀನೆನಗೆ
ತಿಳುಹಿ ಮತಿಯನು ಎನ್ನ ಜಿಹ್ವೆಗೆ
ಮೊಳಗುವಂದದಿ ನಿನ್ನ ನಾ
ಮಾವಳಿಯ ಪೊಗಳಿಕೆಯಿತ್ತು ರಕ್ಷಿಸು ನಮ್ಮನನವರತ

ದೀನ ನಾನು ಸಮಸ್ತ ಲೋಕಕೆ
ದಾನಿ ನೀನು ವಿಚಾರಿಸಲು ಮತಿ
ಹೀನ ನಾನು ಮಹಾ ಮಹಿಮ ಕೈವಲ್ಯ ಪತಿ ನೀನು
ಏನ ಬಲ್ಲೆನು ನಾನು ನೆರೆ ಸು
ಜ್ಞಾನ ಮೂರುತಿ ನೀನು ನಿನ್ನ ಸ
ಮಾನರುಂಟೇ ದೇವ ರಕ್ಷಿಸು ನಮ್ಮನನವರತ

-ಶ್ರೀ ಕನಕದಾಸರು


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಕವನ

***ಠrik Party!!!***



ಶ್ರೀವತ್ಸ ಕುಲಕರ್ಣಿ

ಬೀದಿ ಬೀದಿಗೂ, Party ಹುಟ್ಟಿದೆ,
ಒಂದೊಂದ್ Partyಗೂ Canteen ಎದ್ದಿದೆ,
ಒಂದೊಂದ್ ಊಟಕ್ಕೂ, ಓಟಿನ ಉಡಿ ಇದೆ,
ಹರಿಕೆಯ ಸುರಿಮಳೆ, ಜನರ ಮುಂದಿದೆ….

ಆ ಡಿಂಗು ಟಕ… ಟಕ…ಟಕ… ಟಕ…
ಡಿಂಗು ಟಕ… ಟಕ…ಟಕ… ಟಕ…

Party ಗೆಲ್ಲೋದು, ಜನರ ಕೈಲಿದೆ,
ಊಟ ಕೊಟ್ಟೋರ್ದು, ಜೇಬು ತುಂಬಿದೆ,
ಓಟು ಹಾಕೋರ್ಗೆಲ್ಲಾ, ಊಟ ಸಿಕ್ಕಿದೆ,
ಊಟ ಮಾಡ್ದೋರ್ಗೆಲ್ಲಾ, ದೇಹ ಕೆಟ್ಟಿದೆ…

ಆ ಡಿಂಗು ಟಕ… ಟಕ…ಟಕ… ಟಕ…
ಡಿಂಗು ಟಕ… ಟಕ…ಟಕ… ಟಕ…

ಓಟ್ ಹಾಕಿ ಊಟಕ್ಕೆ, ಅಂತಾನೆ ಇಟ್ಟೋರೆ,
ಇಷ್ಟ್ ವರ್ಸ ಇಲ್ದೀರೋ, ಕ್ಯಾಮೇನೇ ನಡಸೋರೆ,
ಊಟ್ ಮಾಡಿ… ತಲ್ಕೆಟ್ಟು… ಓಟ್ ಸುಮ್ನೆ ಒತ್ ಬ್ಯಾಡ್ರಿ,
ಒತ್ತಾಕ್ ಮುಂಚೆ ಒಂದಾಪ, ಸಂದಾಗಿ ಯೋಚಿಸ್ರಿ….

ಆ ಡಿಂಗು ಟಕ… ಟಕ…ಟಕ… ಟಕ…
ಡಿಂಗು ಟಕ… ಟಕ…ಟಕ… ಟಕ…

ಓಟಿಗೋಸ್ಕರ ಊಟಾನೇ, ಒತ್ತೆಯಾಗಿ ಇಟ್ಟೋರು,
ಗೆದ್ದಮೇಲೆ ಕಾಸ್ಗೋಸ್ಕರ, ದೇಶಾನೇ ಮಾರ್ಯಾರು,
ಓಟನ್ನು… ಹಾಕಕ್ಮುಂಚೆ, ನೀವೆಲ್ಲಾ ಯೋಚಿಸಿ,
ಗೆಲ್ಸುದ್ ಮೇಲ್ ಇಳ್ಸೋದು ಕಷ್ಟಾನೇ ಯಾಚಿಸಿ…
So all of you thinking once again….
ಬೀದಿ ಬೀದಿಗೂ, Party ಹುಟ್ಟಿದೆ,
ಒಂದೊಂದ್ Partyಗೂ Canteen ಎದ್ದಿದೆ,
ಒಂದೊಂದ್ ಊಟಕ್ಕೂ, ಓಟಿನ ಉಡಿ ಇದೆ,
ಹರಿಕೆಯ ಸುರಿಮಳೆ ಜನರ ಮುಂದಿದೆ….

## ಕವನ

***ಶ್ರಾವಣ.***



ಲಕ್ಷ್ಮಿ ಕೊಲಾಲ್

ಹೂರಣದ ಘಮದಲಿ
ತೋರಣದ ನೆರಳಲಿ
ಪ್ರೇರಣೆಯ ಭರಿಸಲು
ಶ್ರಾವಣದ ಹಬ್ಬಗಳು ಬಂದಿಹವು ನಾಡಲಿ!…

ಮಲ್ಲಿಗೆಯ ಕಂಪು ಎಲ್ಲೆಡೆ ಪಸರಿಹುದು
ಕಲ್ಲಿನ ಪ್ರತಿಮೆಗಳಿಗೆ ಜೀವಕಳೆ ತುಂಬಿಹುದು
ಮೆಲ್ಲ ಮೆಲ್ಲನೆ ಶ್ರೀ ಕೃಷ್ಣನು ಕಾಲಿಡುತಿರೆ
ಡೊಳ್ಳು ಹೊಟ್ಟೆ ಗಣಪನು ಧಾಪುಗಾಲು ಹಾಕಿ ಬರುತಿಹನು!..

ಮಧುಮಗಳನು ರಕ್ಷಿಸಲು
ಮಂಗಳಗೌರಿಯೂ ಆಗಮಿಸಿದಳು
ಮಂಗಳವಾರದಲಿ ..
ವಿಜೃಂಭಣೆಯಿಂದ ವರವ ನೀಡುವಳು
ವರಮಹಾಲಕ್ಷ್ಮಿಯೂ ಶುಕ್ರವಾರದಲಿ
ಸ್ವರ್ಣಗೌರಿಯೂ ಸುಖ ಸಂಪತ್ತನ್ನು
ನೀಡಿ ನಮ್ಮನೆಲ್ಲಾ ಕಾಪಾಡಲಿ

ದಾರಿದೀವಿಗೆ ಹೊಸ ಆಶಯಗಳಿಗೆ …ಶ್ರಾವಣದಾ
ಹಬ್ಬಗಳ ಆಚರಣೆ ಸಂಭ್ರಮದಿ ನೆರವೇರಲಿ…
ಹೂರಣದ ಘಮದಲಿ….ತೋರಣದಾ ನೆರಳಲಿ !!…

## ನಾವು ನೋಡಿದ ಸಿನೆಮಾ











Copyright © KCO – Brindavana

# ಬೃಂದಾವನ ವಾಣಿ


ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಬಾಲ ಪ್ರತಿಭೆ






ಶ್ರೇಯ ರಾಘವೇಂದ್ರ




ಗಹನ್ ಮೊಟ್ಟಣ್ಣ



ಸಾರ್ಥಕ್ ರಾವ್



ಸಾನ್ವಿ ಪದಮಾರ್



ಅರ್ನವ್ ಪದಮಾರ್



ವಿಸ್ಮಿತ ಪ್ರಶಾಂತ್ & ಅನ್ವಿತ ಪ್ರಶಾಂತ್


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ರಸ ಪ್ರಶ್ನೆಗಳು

ಬೃಂದಾವನ ವಾಣಿಯ ಈ ಸಂಚಿಕೆ ಓದಿದ ಮೇಲೆ, ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ ಮತ್ತು ಬೃಂದಾವನ ಗಣೇಶೋತ್ಸವ ಕಾರ್ಯಕ್ರಮದಲ್ಲಿ ಬಹುಮಾನ ಗೆಲ್ಲಿರಿ !!!
(ಉತ್ತರಗಳೆಲ್ಲ ಈ ಸಂಚಿಕೆಯಲ್ಲಿವೆ !!)

ಉತ್ತರಗಳನ್ನು ಸೆಪ್ಟೆಂಬರ್ ೨೨,೨೦೧೭ ಒಳಗೆ ಇಮೇಲ್ ಮಾಡಿ : **vani@brindavana.org**
ಒಬ್ಬರಿಗೆ ಒಂದೇ ಪ್ರವೇಶ : ಉತ್ತರದ ಜೊತೆಗೆ ನಿಮ್ಮ ಹೆಸರು, ಫೋನ್ ನಂಬರ್ ಕಳಿಸಿ. .


೧. ದುಃಖದಲ್ಲಿದ್ದ ಮಗ ಶೇಷು ವನ್ನು ಸಂತೈಸಲು ಅಮ್ಮ ವತ್ಸಲಾ ಏನು ಮಾಡಿದಳು ?
೨. ಸ್ವಾತಿ ಯಾವೂರಿನ ಜಾತ್ರೆಗೆ ಬಂದಿದ್ದಳು ?
೩. 'ಏನ ಬೇಡಲಿ...' ಕಥೆಯಲ್ಲಿ, ಲೇಖಕಿ ವಿನಾಯಕನ ದೇವಸ್ಥಾನದಲ್ಲಿ ದೇವರಲ್ಲಿ ಏನು ಬೇಡಿದರು?

**ಬೃಂದಾವನ ವಾಣಿ ಸಂಪಾದಕ ಮಂಡಳಿಯ ತೀರ್ಮಾನ ಅಂತಿಮ*



ಪ್ರಶಾಂತ್ ಎಂ.







## ಸದಸ್ಯತ್ವ ಮಾಹಿತಿ

ಬೃಂದಾವನ ಕನ್ನಡ ಕೂಟ ,ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ನ್ಯೂ ಜೆರ್ಸಿ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ". ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿದ್ಯಾರ್ಥಿ ಸದಸ್ಯತ್ವಗಳಲ್ಲಿ ,ನಿಮಗೆ ಸೂಕ್ತವಾದ ಸದಸ್ಯತ್ವವನ್ನು ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ. www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ. ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವದ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.
ಏನಾದರು ಪ್ರಶ್ನೆ ಇದ್ದಲ್ಲಿ president@brindavana.orgಗೆ ಇ-ಮೇಲ್ ಮಾಡಿ.
ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಎಲ್ಲರೂ ಸೇರಿ ಕನ್ನಡ ತಾಯಿ ಭುವನೇಶ್ವರಿಯನ್ನು ಆರಾಧಿಸಿ, ಕನ್ನಡದ ಕಂಪನ್ನು ಹರಡೋಣ.

**ಸೂಚನೆ:**

ನ್ಯೂಜೆರ್ಸಿಯ ಮತ್ತು ಸಮಸ್ತ ಕನ್ನಡದ ಸ್ನೇಹಿತರೆಲ್ಲರೂ "ಬೃಂದಾವನ ವಾಣಿ"ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ. ವಾಣಿಯಲ್ಲಿ ಮೂಡಿಬರುವ ಅಂಕಣಗಳು-ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ, ಬಾಲಪ್ರತಿಭೆ, ಕ್ರೀಡ, ಅಮೆರಿಕಾ ನಾ ಕಂಡಂತೆ, ಯುವ ವಾಣಿ, ಸುತ್ತ-ಮುತ್ತ, ಹಾಗೇ ಸುಮ್ಮನೆ.. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ಅಮೆರಿಕಾ ನಾ ಕಂಡಂತೆ** - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.
ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ ತಪ್ಪದೇ ತಿಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ, ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. 'ಬೃಂದಾವನ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.

'ಬೃಂದಾವನ ವಾಣಿ' ಮತ್ತು 'ಬೃಂದಾವನ' ಕನ್ನಡ ಕೂಟ ಯಾವುದೇ ಒಂದು ರಾಜಕೀಯ ಪಕ್ಷವನ್ನು , ಧರ್ಮವನ್ನು ಅಥವಾ ಪಂಗಡವನ್ನು ಪ್ರತಿನಿಧಿಸುವುದಿಲ್ಲ . ನಮ್ಮ ಧ್ಯೇಯ ಕರ್ನಾಟಕ ರಾಜ್ಯ, ಕನ್ನಡ ಭಾಷೆ , ಸಂಸ್ಕೃತಿ ಹಾಗು ಕನ್ನಡಿಗರ ಅಭ್ಯುಧಯ ಮಾತ್ರ.


Copyright © KCO – Brindavana